| | | ಮೂರನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1ನೇ ಅವಧಿ | 10 ನಿ | ಕನ್ನಡ<br>ಭಾವಿಯಲ್ಲಿ ಚಂದ್ರ | * ಕಥನಗಳು, ವಿವರಣೆಗಳು, ಪದಬಂಧಗಳು ಮತ್ತು ಒಗಟುಗಳನ್ನು ಆಲಿಸುವುದರೊಂದಿಗೆ ಅರ್ಥಮಾಡಿಕೊಳ್ಳುವುದು | * ಒಗಟುಗಳ ಪುಸ್ತಕ, * ಸರಳ ಶಿಶುಗೀತೆಗಳ ಪುಸ್ತಕ, * ಕಥೆಗಳ ಚಿತ್ರಪಟಗಳು | ಶಿಕ್ಷಕರು | **ಪೂರ್ವಭಾವಿ ಚಟುವಟಿಕೆ**<br>* ನರಿಯು ತೋಟಕೆ ಹೋಯಿತು ...... ಎಂಬ ಅಭಿನಯ ಗೀತೆಯನ್ನು ಹೇಳಿಕೊಡುವರು.<br>* ಸರಳ ಗ್ರಾಮ್ಯ ಒಗಟುಗಳನ್ನು ಮಕ್ಕಳಿಂದ ಹೇಳಿಸುವರು. | ಕನ್ನಡ – ಕವನ | * ಚರ್ಚೆ ಹಾಗೂ ನಾಟಕಗಳನ್ನು ಆಲಿಸುವುದರ ಜೊತೆಗೆ ಅರ್ಥಮಾಡಿಕೊಳ್ಳುವುದು.<br>* ಕೈ ಬರಹ ಹಾಗೂ ಸಣ್ಣಕಥೆ ಮತ್ತು ಮಕ್ಕಳ ಸಾಹಿತ್ಯವನ್ನು ನಿರರ್ಗಳವಾಗಿ ಓದುವುದು.<br>* ಸರಳವಾಗಿ ಸ್ಪಷ್ಟವಾಗಿ ಸರಿಯಾದ ಕ್ರಮದಲ್ಲಿ ಬರೆಯುವುದು. | ಕರ್ನಾಟಕ ನಕ್ಷೆಯಲ್ಲಿ ಕನ್ನಡಾಂಬೆಯಿರುವ ಚಿತ್ರಪಟ, ಕುವೆಂಪುರವರ ಭಾವಚಿತ್ರಪಟ, ಕನ್ನಡ ಕವನಗಳು (ನಾಡ ಗೀತೆಗಳು) | ಶಿಕ್ಷಕರು | **ಪೂರ್ವಭಾವಿ ಚಟುವಟಿಕೆ**<br>ತರಗತಿ 3ರ ಚಟುವಟಿಕೆಯಲ್ಲಿ ಮಕ್ಕಳು ಭಾಗವಹಿಸುವರು. |
| | 30 ನಿ | | | | ಶಿಕ್ಷಕರು | **ಕಲಿಕಾ ಚಟುವಟಿಕೆ (ನೇರ ಬೋಧನೆ)**<br>ತಿಂಗಳ ಬೆಳಕಿನ ..................................................... ..................................................... ಹಗ್ಗವನಿಳಿಸಿದನು.<br>ಇಲ್ಲಿಯುವರೆಗಿನ 3 ಸಾಲುಗಳನ್ನು ರಾಗವಾಗಿ ಅಭಿನಯದೊಂದಿಗೆ ಹೇಳಿಕೊಂಡಿರುವರು. ನಂತರ ಪದ್ಯದ ಸಾರಾಂಶವನ್ನು ತಿಳಿಸುವರು. ಹೊಸ ಪದಗಳ ಅರ್ಥ ವಿವರಣೆ ನೀಡುವರು. ಮಕ್ಕಳಿಂದ ಕವನವನ್ನು ಓದಿಸುವರು. ತಪ್ಪಿದ್ದಲ್ಲಿ ತಿದ್ದಿ ಹೇಳುವರು. | | | | ಹಿರೇಮಣಿ | **ಕಲಿಕಾ ಚಟುವಟಿಕೆ (ಸ್ವಕಲಿಕೆ)**<br>ಕಿ ಗ ಪ ಅ ಪ್ತ<br>ಕ ಣ್ಣು ಹ ರಿ ರ<br>ತೆ ಜ್ಞ ಕ ತೆ ಬ್ಬ<br>ಬಿ ಮ ನ್ನ ಣೆ ದ<br>ಏ ಭ ಡ ಕ್ತ ಸ<br>ಈ ಮೇಲಿನ ಚೌಕದಲ್ಲಿರುವ ಅಕ್ಷರಗಳನ್ನು ಬಳಸಿಕೊಂಡು ಪದ ರಚಿಸುವಂತೆ ಸೂಚನೆ ನೀಡುವರು. ಹೀರಮಣಿ ಇದಕ್ಕೆ ಸಹಾಯಕನಾಗಿರುತ್ತಾನೆ. |
| | 30 ನಿ | | | | ಹಿರೇಮಣಿ | **ಅಭ್ಯಾಸ ಮತ್ತು ಬಳಕೆಯ ಚಟುವಟಿಕೆ**<br>* ಶಿಕ್ಷಕರು ಹೇಳಿದ ಪದ್ಯ ಭಾಗವನ್ನು ಮಕ್ಕಳಿಂದ ಹೇಳಿಸುವನು.<br>* ಮಕ್ಕಳಿಂದ ಕವನ ಭಾಗವನ್ನು ಬರೆಸುವನು. | | | | ಶಿಕ್ಷಕರು | ಶಿಕ್ಷಕರು ಕನ್ನಡ ಕವನವನ್ನು ರಾಗವಾಗಿ ಸ್ವರಭಾರ ಏರಿಳಿತದೊಂದಿಗೆ "ಕನ್ನಡ ಎನೆ ............................................................................................................................. ಕನ್ನಡ ತಾಯಿಯ ಸೇವೆಯ ಮಾಡೆ."ಯ ವರೆಗೆ ಹೇಳಿಕೊಡುವರು. ಹಾಗೂ ಹೊಸ ಪದಗಳ ಅರ್ಥ ವಿವರಣೆ ನೀಡುವರು ಮಕ್ಕಳಿಂದ ಕವನವನ್ನು ಓದಿಸುವರು. |
| | 10 ನಿ | | | | ಶಿಕ್ಷಕರು | * ಮಕ್ಕಳಿಂದ ಕವನವನ್ನು ರಾಗವಾಗಿ ಸಾಮೂಹಿಕವಾಗಿ ಹೇಳಿಸುವರು. ಉಚ್ಚಾರಣಾ ದೋಷವನ್ನು ತಿದ್ದುವರು.<br>* ಮಕ್ಕಳು ಬರೆದ ಪದ್ಯವನ್ನು ವೀಕ್ಷಿಸಿ ತಪ್ಪಿದ್ದಲ್ಲಿ ತಿದ್ದುವರು. | | | | ಹಿರೇಮಣಿ | **ಅಭ್ಯಾಸ ಮತ್ತು ಬಳಕೆಯ ಚಟುವಟಿಕೆ**<br>* ಶಿಕ್ಷಕರು ಹೇಳಿಕೊಟ್ಟ ಕವನವನ್ನು ಮಕ್ಕಳಿಂದ ಓದಿಸುವನು<br>* ಮಕ್ಕಳಿಂದ ಆ ಪದ್ಯ ಭಾಗವನ್ನು ಬರೆಸುವನು. |

**ಮೂರನೇ ತರಗತಿ**

| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|
| 1 | 2 | 3 | 4 | 5 | 6 | 7 |
| 2ನೇ ಅವಧಿ | 10 ನಿ | ಜೀವನ ವಿಜ್ಞಾನ : ಇರುವೆ ಮತ್ತು ಪಾರಿವಾಳ ಕಥೆ | * ಸಹಕಾರ ಮನೋಭಾವನೆಯನ್ನು ಮೂಡಿಸುವುದು. | * ಸರಳ ಕಥೆಗಳ ಚಿತ್ರಪಟ ಮತ್ತು ಮಕ್ಕಳ ಕಥೆಗಳ ಪುಸ್ತಕ.<br>* ಇರುವೆ ಪಾರಿವಾಳ ಕಥೆಗೆ ಸಂಬಂಧಿಸಿದ ಚಿತ್ರದ ಕಾರ್ಡ್‌ಗಳು. | ಶಿಕ್ಷಕರು | **ಪೂರ್ವಭಾವಿ ಚಟುವಟಿಕೆ**<br>* ಒಗ್ಗಟ್ಟಿನಲ್ಲಿ ಬಲವಿದೆ ಎಂಬ ಕಥೆಯನ್ನು ಭಾವಪೂರ್ಣವಾಗಿ ಹೇಳಿಕೊಡುವರು. ಮಕ್ಕಳು ಆಸಕ್ತಿಯಿಂದ ಆಲಿಸುವರು. |
| | 30 ನಿ | | | | ಶಿಕ್ಷಕರು | **ಕಲಿಕಾ ಚಟುವಟಿಕೆ**<br>ಇರುವೆ ಮತ್ತು ಪಾರಿವಾಳ ಕಥೆಗೆ ಸಂಬಂಧಪಟ್ಟ ಚಿತ್ರಗಳನ್ನು ಪ್ರದರ್ಶಿಸುತ್ತ ಕಥೆಯನ್ನು ಹೇಳಿಕೊಡುವರು. ಮಕ್ಕಳು ಆಲಿಸುವುದರೊಂದಿಗೆ ಅರ್ಥೈಸಿಕೊಳ್ಳುವರು. |
| | 30 ನಿ | | | | ಹಿರೇಮಣಿ | * ಹೇಳಲಾದ ಕಥೆಯನ್ನು ಮಕ್ಕಳಿಂದ ಹೇಳಿಸುವರು.<br>* ಕಥೆಯಲ್ಲಿ ಬರುವ ಸನ್ನಿವೇಶಗಳನ್ನು ಹೇಳಿಸುವನು. |
| | 10 ನಿ | | | | ಹಿರೇಮಣಿ | ಮಕ್ಕಳಿಗೆ ಗೊತ್ತಿರುವ ಸ್ಥಳೀಯ ಕಥೆಗಳನ್ನು ಮಕ್ಕಳಿಂದ ಹೇಳಿಸುವರು. |

**ಐದನೇ ತರಗತಿ**

| ಸಮಯ ಹಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|
| 2 | 8 | 9 | 10 | 11 | 12 |
| 10 ನಿ | ಗಣಿತ<br>1 ಸಂಖ್ಯೆಗಳು (ಮುಂದುರೆದ ಕಲ್ಪನೆ) | * 5, 6, 7, ಅಂಕಿಗಳನ್ನೊಳಗೊಂಡ ಸಂಖ್ಯೆಗಳ ಸ್ಥಾನಬೆಲೆ, ಓದುವುದು, ಬರೆಯುವುದು. | ಅಂಕಿಗಳ ಮಿಂಚು ಪಟ್ಟಿಗಳು, ಸ್ಥಾನಬೆಲೆ ಕೋಷ್ಟಕ ಬಸ್ ಟಿಕೇಟ್‌ಗಳು | ಶಿಕ್ಷಕರು | **ಪೂರ್ವಭಾವಿ ಚಟುವಟಿಕೆ**<br>3ನೇ ತರಗತಿಗೆ ನೀಡಲಾದ ಚಟುವಟಿಕೆಯಲ್ಲಿ ಭಾಗವಹಿಸುವರು. |
| 30 ನಿ | | | | ಹಿರೇಮಣಿ | ನೀಡಲಾದ ಸ್ಥಾನಬೆಲೆಯ ಮಿಂಚು ಪಟ್ಟಿಗಳನ್ನು ಹಾಗು ಅಂಕಿ ಮಿಂಚು ಪಟ್ಟಿಗಳನ್ನು ಸ್ಥಾನಬೆಲೆಗಳಿಗೆ ಅನುಗುಣವಾಗಿ ಜೋಡಿಸಿ ಸಂಖ್ಯೆಗಳನ್ನು ಬರೆಯುವರು. ನೀಡಲಾದ 10 ಅಂಕಿ ಮಿಂಚುಪಟ್ಟಿಗಳಲ್ಲಿ ಯಾರು? ಹೆಚ್ಚು ಸಂಖ್ಯೆಗಳನ್ನು ಬರೆಯುತ್ತಾರೆಂದು ನೋಡುವನು.<br>ಸ್ಥಾನ ಬೆಲೆ ಕೋಷ್ಟಕ: ಸಾವಿರ \| ನೂರು \| ಹತ್ತು \| ಬಿಡಿ<br>5 3 2 9<br>4 8 6 1 |
| 30 ನಿ | | | | ಶಿಕ್ಷಕರರು | ಪಠ್ಯದಲ್ಲಿರುವ ಸಂದರ್ಭ 1 ಮತ್ತು 2ರ ವಿವರಣೆ ನೀಡುತ್ತಾ ಮೌಖಿಕವಾಗಿ ಮಕ್ಕಳಿಂದ ಚಿತ್ರಪಟಗಳೊಂದಿಗೆ ಉತ್ತರ ಬರೆಯುವರು.<br>ಉದಾ :– ಬಸ್ ಟಿಕೇಟ್‌ನ ಕ್ರಮಸಂಖ್ಯೆ, ವಿವಿಧ ಜಿಲ್ಲೆಗಳಲ್ಲಿರುವ ಜನಸಂಖ್ಯೆ ಕೆಲವು ರಾಜ್ಯಗಳ ವಿಸ್ತೀರ್ಣ ಮುಂತಾದವುಗಳನ್ನು ಬರೆಸಿ, 10,000ದವರೆಗಿನ ಸ್ಥಾನಬೆಲೆ ಕೋಷ್ಟಕ ಪರಿಚಯಿಸಿ ಕೋಷ್ಟಕದಲ್ಲಿ ಬರೆಸಿ, ಓದುವ ಕ್ರಮ ತಿಳಿಸುವರು. |
| 10 ನಿ | | | | ಶಿಕ್ಷಕರು | ಮಕ್ಕಳಿಗೆ 10,000ದ ವರೆಗಿನ ಸ್ಥಾನಬೆಲೆ ಕೋಷ್ಟಕ ಹಾಗು ಅಂಕಿ ಮಿಂಚುಪಟ್ಟಿಗಳನ್ನು ನೀಡಿ ಬೇರೆ ಬೇರೆ ಸಂಖ್ಯೆಗಳನ್ನು ರಚಿಸಿ ಓದುವಂತೆ ಪ್ರೇರೇಪಿಸುವರು.<br>ಸ್ಥಾನ ಬೆಲೆ ಕೋಷ್ಟಕ: ಹತ್ತು ಸಾ. \| ಸಾವಿರ \| ನೂರು \| ಹತ್ತು \| ಬಿಡಿ<br>① ② ③ ④ ⑤ ⑥ ⑦ ⑧ ⑨ ⓪ |

| ಅವಧಿ | ಸಮಯ ಹಂಚಿಕೆ | ಮೂರನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಘಟಕದ ಹೆಸರು | ಕಲಿಕಾ ಉದ್ದೇಶ | ಕಲಿಕೋಪಕರಣಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಘಟಕದ ಹೆಸರು | ಕಲಿಕಾ ಉದ್ದೇಶ | ಕಲಿಕೋಪಕರಣಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 3ನೇ ಅವಧಿ | 20 ನಿ | ಗಣಿತ<br>ಪೂರ್ಣಾಂಕಗಳು ಮತ್ತು ಸಂಖ್ಯಾ ಸೂಚಕಗಳು | * 1–999ರ ವರೆಗಿನ ಸಂಖ್ಯೆಗಳ ಪರಿಚಯ ಓದುವುದು, ಬರೆಯುವುದು. | ಅಂಕಿ ಮಿಂಚು ಪಟ್ಟಿಗಳು | ಶಿಕ್ಷಕರು | **ಪೂರ್ವಭಾವಿ ಚಟುವಟಿಕೆ**<br>1–99ರವರೆಗಿನ ಅಂಕಿಗಳ ಮಿಂಚುಪಟ್ಟಿಗಳನ್ನು ತೆಗೆದು ಕೊಂಡು ಅವುಗಳನ್ನು ಮಕ್ಕಳಿಂದ ಓದಿಸುವರು. | 5ನೇ ತರಗತಿ 4ನೇ ತರಗತಿಯೊಂದಿಗೆ ಹೊಂದಾಣಿಕೆಯಾಗಿರುತ್ತದೆ | | | | |
| | 30 ನಿ | | | * ಕಡ್ಡಿಗಳು<br>* ಮಣಿಕಟ್ಟು<br>* ಮಣಿಗಳು | ಶಿಕ್ಷಕರು | ಪಠ್ಯಪುಸ್ತಕದ ಪುಟಸಂಖ್ಯೆ 7 ಮತ್ತು 8ರಲ್ಲಿಯ ಚಿತ್ರ–1, 2, 3, ರಲ್ಲಿರುವಂತೆ ಕಡ್ಡಿಗಳನ್ನು ಮತ್ತು ಮಣಿಗಳನ್ನು ಬಳಸಿ 99ಕ್ಕೆ 1 ನ್ನು ಸೇರಿಸಿದಾಗ 100 ಆಗುತ್ತದೆ ಎಂಬುದನ್ನು ಮಣಿಕಟ್ಟಿನಲ್ಲಿ 9 ಹತ್ತುಗಳು 9 ಬಿಡಿಗಳನ್ನು + 1 ನ್ನು ಸೇರಿಸಿದಾಗ ನೂರು ಆಗುವುದು ಎಂದು 10ರ 10 ಕಟ್ಟುಗಳು ಸೇರಿ 100. ನೂರು ಮೂರು ಸ್ಥಾನಗಳನ್ನು ಹೊಂದಿರುತ್ತದೆ. ಎಂದು ತಿಳಿಸುವರು. | | | | | |
| | 25 ನಿ | | | * ಕಡ್ಡಿಗಳು,<br>* ಮಣಿಕಟ್ಟುಗಳು | ಶಿಕ್ಷಕರು | **ಅಭ್ಯಾಸ ಮತ್ತು ಬಳಕೆಯ ಚಟುವಟಿಕೆ**<br>ಚಿತ್ರ 4, 5, 6 ಹಾಗೂ ಅಭ್ಯಾಸದಲ್ಲಿ ಚಿತ್ರನೋಡಿ ಸಂಖ್ಯೆ ಬರೆ. ಮಣಿಕಟ್ಟುನೋಡಿ ಸಂಖ್ಯೆ ಬರೆ ಖಾಲಿ ಜಾಗವನ್ನು ಸೂಕ್ತ ಸಂಖ್ಯೆಯಿಂದ ಭರ್ತಿ ಮಾಡು, ಸಂಖ್ಯೆಗಳನ್ನು ಸ್ಥಾನಬೆಲೆ ಪಟ್ಟಿಯಲ್ಲಿ ಬರೆ ಇತ್ಯಾದಿಗಳನ್ನು ಮಕ್ಕಳಿಂದ ಮಾಡಿಸುವರು. ಶಿಕ್ಷಕರು ಗಮನಿಸುತ್ತಾ ಮಾರ್ಗದರ್ಶನ ನೀಡುವರು. | | | | | |
| | 5 ನಿ | | | * ಸ್ಥಾನ ಬೆಲೆ ಕೋಷ್ಟಕ<br>* ಅಂಕಿ ಮಿಂಚು ಪಟ್ಟಿಗಳು | ಶಿಕ್ಷಕರು | * ಕೆಲವು ಅಂಕಿಗಳನ್ನು ಕೊಟ್ಟು ಬರೆಯಲು ತಿಳಿಸುವುದು. ಕಪ್ಪು ಹಲಗೆ ಮೇಲೆ ಸ್ಥಾನಬೆಲೆ ಕೋಷ್ಟಕಹಾಕಿ ಸಂಖ್ಯೆಗಳನ್ನು ನೀಡಿ ಓದಲು ಹೇಳುವರು. ನಂತರ ಬರೆಯಲು ತಿಳಿಸುವರು. | | | | | |

| ಅವಧಿ | ಸಮಯ ಹಂಚಿಕೆ | ಮೂರನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಐದನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 4ನೇ ಅವಧಿ | 10 ನಿ | ಪರಿಸರ ಅಧ್ಯಯನ<br>ಜೀವಿಗಳು ನಿರ್ಜೀವಿಗಳು. | * ಸುತ್ತಲೂ ಇರುವ ವಸ್ತುಗಳನ್ನು ಗಮನಿಸುವರು.<br>* ಸಜೀವ ಮತ್ತು ನಿರ್ಜೀವ ವಸ್ತುಗಳ ವಿಂಗಡಿಸುವುದನ್ನು ಕಲಿಯುವರು. | | ಶಿಕ್ಷಕರು | **ಪೂರ್ವಭಾವಿ ಚಟುವಟಿಕೆ**<br>ಮಕ್ಕಳು ತಮ್ಮ ಸುತ್ತ ಮುತ್ತಲಿರುವ ವಸ್ತುಗಳ ಹೆಸರುಗಳನ್ನು ಹೇಳುವರು ಅವುಗಳನ್ನು ಶಿಕ್ಷಕರು ಕಪ್ಪು ಹಲಗೆಯ ಮೇಲೆ ಪಟ್ಟಿ ಮಾಡುವರು. | | | | | |
| | 70 ನಿ | | | * ಜೀವಿಗಳ ಚಿತ್ರಪಟ | ಶಿಕ್ಷಕರು | **ಕಲಿಕಾ ಚಟುವಟಿಕೆ**<br>* ಮಕ್ಕಳನ್ನು ಆಟದ ಬಯಲಿಗೆ ಕರೆದುಕೊಂಡು ಹೋಗಿ ಸುತ್ತಲೂ ಕಾಣುವ ಎಲ್ಲಾ ವಸ್ತು ಮತ್ತು ಪ್ರಾಣಿ ಪಕ್ಷಿಗಳನ್ನು ಗಮನಿಸಲು ಹೇಳುವರು.<br>* ತರಗತಿ ಕೋಣೆಯಲ್ಲಿ ಮಕ್ಕಳು ನೋಡಿದ ವಸ್ತುಗಳ ಹೆಸರುಗಳನ್ನು ಬರೆಯುವರು. ಅವುಗಳಲ್ಲಿ ಜೀವ ಇರುವ ಮತ್ತು ಜೀವ ಇಲ್ಲದ ವಸ್ತುಗಳಾಗಿ ವಿಂಗಡಿಸುವರು. ಜೀವವಿರುವ ವಸ್ತುಗಳನ್ನು ಸಜೀವಿಗಳು, ಜೀವ ಇಲ್ಲದ ವಸ್ತುಗಳನ್ನು ನಿರ್ಜೀವಿಗಳು ಎಂದು ಕರೆಯುವರು ಎಂದು ತಿಳಿಸುವರು. ಬೆಂಚು, ಕುರ್ಚಿ, ಬೆಕ್ಕು, ನಾಯಿ, ಗಿಡ, ಮರಗಳು. ಇವುಗಳನ್ನು ವಿಂಗಡಿಸಲು ತಿಳಿಸುವರು.<br>* ಜೀವಿಗಳು ಹಾಗೂ ನಿರ್ಜೀವಿಗಳನ್ನು ಹೇಗೆ ಗುರುತಿಸುವುದು ಎಂಬುದನ್ನು ಮಕ್ಕಳೊಂದಿಗೆ ಚರ್ಚಿಸುವರು.<br>* ಸಜೀವಿ ಮತ್ತು ನಿರ್ಜೀವಿ (ಕೆರೆದಡ) ಆಟವನ್ನು ಆಡಿಸುವುದು.<br>ಮಕ್ಕಳನ್ನು ವೃತ್ತಾಕಾರವಾಗಿ ನಿಲ್ಲಿಸಿ ಸಜೀವಿಗಳ ಹೆಸರು ಹೇಳಿದಾಗ ಮಕ್ಕಳು ಮುಂದೆ ಜಿಗಿಯುವರು. ನಿರ್ಜೀವಿಗಳ ಹೆಸರು ಹೇಳಿದಾಗ ಹಿಂದಕ್ಕೆ ಜಿಗಿಯುವರು. | | | | | 5ನೇ ತರಗತಿ 4ನೇ ತರಗತಿಯೊಂದಿಗೆ ಹೊಂದಾಣಿಕೆಯಾಗಿರುತ್ತದೆ |

| ಅವಧಿ | ಸಮಯ ಹಂಚಿಕೆ | ಮೂರನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯಗಳು | ಬಳಸುವ ಬೋಧನೋಪಕರಣಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯಗಳು | ಬಳಸುವ ಬೋಧನೋಪಕರಣಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1ನೇ ಅವಧಿ | 10 ನಿ | ಕನ್ನಡ - ಬಾವಿಯಲ್ಲಿ ಚಂದ್ರ - (ಮುಂದುವರೆದುದು) | * ಕಥನಗಳು, ವಿವರಣೆಗಳು, ಪದಬಂಧಗಳು ಮತ್ತು ಒಗಟುಗಳನ್ನು ಆಲಿಸುವುದರೊಂದಿಗೆ ಅರ್ಥಮಾಡಿಕೊಳ್ಳುವರು. | | ಶಿಕ್ಷಕರು | **ಪೂರ್ವಭಾವಿ ಚಟುವಟಿಕೆ**<br>ಹಿಂದಿನ ಅವಧಿಯಲ್ಲಿ ಹೇಳಲಾದ ಪದ್ಯವನ್ನು ಮಕ್ಕಳಿಂದ ಓದಿಸುವರು. | ಕನ್ನಡ - ಕವನ (ಮುಂದುವರೆದುದು) | * ಚರ್ಚೆ ಹಾಗೂ ನಾಟಕಗಳನ್ನು ಆಲಿಸುವುದರೊಂದಿಗೆ ಅರ್ಥಮಾಡಿಕೊಳ್ಳುವರು.<br>* ಕೈ ಬರಹ ಹಾಗೂ ಸ್ವಚ್ಛತೆ ಮತ್ತು ಮಕ್ಕಳ ಸಾಹಿತ್ಯವನ್ನು ನಿರರ್ಗಳವಾಗಿ ಓದುವರು.<br>* ಸರಳವಾಗಿ, ಸ್ಪಷ್ಟವಾಗಿ, ಸರಿಯಾದ ಕ್ರಮದಲ್ಲಿ ಬರೆಯುವರು. | | ಹಿರೇಮಣಿ | ಹಿಂದಿನ ದಿನ ಶಿಕ್ಷಕರು ಹೇಳಿಕೊಟ್ಟ ಪದ್ಯವನ್ನು ಓದಿಸುವನು. |
| | 30 ನಿ | | | | ಶಿಕ್ಷಕರು | ಶಿಕ್ಷಕರು ಪದ್ಯದ ಸಾಲುಗಳಾದ<br>ಹಗ್ಗದ ಕೊಕ್ಕೆಯು ಕಲ್ಲಿಗೆ ..........................................<br>...........................................................................<br>.................................................. ಎಂದೋಡಿದ ಪುಟ್ಟ.<br>ಹೇಳಿಕೊಡುವುದರೊಂದಿಗೆ ಅರ್ಥ ವಿವರಣೆ ನೀಡುವರು. ಹೊಸ ಪದಗಳ ಅರ್ಥ ವಿವರಣೆ ನೀಡುವುದರೊಂದಿಗೆ ಮಕ್ಕಳಿಂದ ರಾಗವಾಗಿ ಪದ್ಯವನ್ನು ಓದಿಸುವರು ಮತ್ತು ಮೌನವಾಗಿ ಓದಲು ಹೇಳುವರು. | | | | ಹಿರೇಮಣಿ | ಪದ್ಯವನ್ನು ಮಕ್ಕಳಿಂದ ಓದಿಸುವುದರೊಂದಿಗೆ ಬರೆಯಲು ತಿಳಿಸುವನು. |
| | 30 ನಿ | | | | ಹಿರೇಮಣಿ | ಮಕ್ಕಳಿಂದ ಪದ್ಯವನ್ನು ಓದಿಸಿ ನಂತರ 9 ಸಾಲುಗಳನ್ನು ನಕಲು ಮಾಡಲು ತಿಳಿಸುವನು. | | | ಕುವೆಂಪು ಚಿತ್ರಪಟ | ಶಿಕ್ಷಕರು | * ಕವನದ ಎಲ್ಲಾ ಸಾಲುಗಳಿಗೆ ಅರ್ಥ ವಿವರಣೆ ನೀಡುತ್ತಾರೆ.<br>(ಸಾರಾಂಶ)<br>* ಕವಿ ಕಾವ್ಯ ಪರಿಚಯ ಮಾಡಿಕೊಡುವರು. |
| | 10 ನಿ | | | ಪ್ರಶ್ನೆಗಳ ಸಂಗ್ರಹ | ಶಿಕ್ಷಕರು | ಶಿಕ್ಷಕರು ಸರಳ ಮೌಖಿಕ ಪ್ರಶ್ನೆಗಳನ್ನು ಕವನಕ್ಕೆ ಸಂಬಂಧಿಸಿದಂತೆ ಕೇಳುವರು. | | | | ಹಿರೇಮಣಿ | ಕನ್ನಡ ಕವನ ಪದ್ಯ ಬರೆದ ಕವಿಯ ಕಾವ್ಯ ಪರಿಚಯದ ಬಗ್ಗೆ ಬರೆಯಲು ತಿಳಿಸುವರು. |

<table>
<tr><th rowspan="2">ಅವಧಿ</th><th rowspan="2">ಸಮಯ ಹಂಚಿಕೆ</th><th colspan="5">ಮೂರನೇ ತರಗತಿ</th><th colspan="5">ಐದನೇ ತರಗತಿ</th></tr>
<tr><th>ವಿಷಯ ಮತ್ತು ಪಾಠದ ಹೆಸರು</th><th>ಸಾಮರ್ಥ್ಯದ ವಿವರ</th><th>ಬಳಸ ಬಹುದಾದ ಕಲಿಕಾ ಸಾಮಗ್ರಿ</th><th>ನಿರ್ವಹಣೆ</th><th>ಕಲಿಕಾ ಪ್ರಕ್ರಿಯೆ</th><th>ವಿಷಯ ಮತ್ತು ಪಾಠದ ಹೆಸರು</th><th>ಸಾಮರ್ಥ್ಯದ ವಿವರ</th><th>ಬಳಸ ಬಹುದಾದ ಕಲಿಕಾ ಸಾಮಗ್ರಿ</th><th>ನಿರ್ವಹಣೆ</th><th>ಕಲಿಕಾ ಪ್ರಕ್ರಿಯೆ</th></tr>
<tr><td>1</td><td>2</td><td>3</td><td>4</td><td>5</td><td>6</td><td>7</td><td>8</td><td>9</td><td>10</td><td>11</td><td>12</td></tr>
<tr><td rowspan="3">2ನೇ ಅವಧಿ</td><td>10 ನಿ</td><td rowspan="3">ಜೀವನ ವಿಜ್ಞಾನ. – ಆರೋಗ್ಯಕರ ಅಭ್ಯಾಸಗಳು</td><td rowspan="3">* ಆಟದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದು.</td><td></td><td>ಹಿರೇಮಣಿ</td><td>ಪೂರ್ವಭಾವಿ ಚಟುವಟಿಕೆ<br>* ಸ್ಥಳೀಯವಾಗಿ ಗೊತ್ತಿರುವ ಆಟಗಳನ್ನು ಮಕ್ಕಳಿಂದ ಪಟ್ಟಿ ಮಾಡಿಸುವರು.</td><td rowspan="3">ಗಣಿತ<br>1.1 ಸಂಖ್ಯೆಗಳು ಮುಂದುವರೆದುದು</td><td rowspan="3">* 5, 6, 7 ಅಂಕಿಗಳನ್ನೊಳಗೊಂಡ ಸಂಖ್ಯೆಗಳ ಸ್ಥಾನಬೆಲೆ, ಓದುವುದು, ಬರೆಯುವುದು,</td><td rowspan="3">ಮಿಂಚುಪಟ್ಟಿ<br>* ಸ್ಥಾನಬೆಲೆ ಕೋಷ್ಟಕ<br>* 0–90ರ ವರೆಗಿನ ಅಂಕಿಗಳ 10 ಸೆಟ್ ಮಿಂಚುಪಟ್ಟಿ<br>* ಸ್ಥಾನಬೆಲೆ ಬೋರ್ಡ್</td><td>ಶಿಕ್ಷಕರರು</td><td>ಸಂಖ್ಯೆಗಳ ಸ್ಥಾನ ಹೆಚ್ಚಿದಂತೆ ಪ್ರತಿಸ್ಥಾನಕ್ಕೂ ಒಂದೊಂದು ಹೆಸರಿರುವುದು ಎಂಬುದನ್ನು ಮಿಂಚುಪಟ್ಟಿ ಮತ್ತು ಮಕ್ಕಳನ್ನು ಬಳಸಿ ಚಟುವಟಿಕೆ ಮಾಡಿಸುವರು.</td></tr>
<tr><td>40 ನಿ</td><td>ಸ್ಥಳೀಯ ಆಟಗಳ ಪಟ್ಟಿ</td><td>ಹಿರೇಮಣಿ</td><td>ಕೆರೆ–ದಡ, ಹಸು–ಹುಲಿ, ಕುಂಟೆಬಿಲ್ಲೆ, ಆಟಗಳನ್ನು ಆಟದ ಬಯಲಿನಲ್ಲಿ ಆಡಿಸುವರು.</td><td>ಶಿಕ್ಷಕರರು</td><td>ಕಲಿಕಾ ಚಟುವಟಿಕೆ<br>ಐದಂಕಿಯ ಅತ್ಯಂತ ದೊಡ್ಡ ಸಂಖ್ಯೆಯು 99,999 ಇದಕ್ಕೆ 1ನ್ನು ಕೂಡಿಸಿದಾಗ 6 ಅಂಕೆ ಸಂಖ್ಯೆಯಾದ 1 ಲಕ್ಷ ಆಗುವುದು.
<table>
<tr><th>ಲಕ್ಷ</th><th>ಹತ್ತು ಸಾವಿರ</th><th>ಸಾವಿರ</th><th>ನೂರು</th><th>ಹತ್ತು</th><th>ಬಿಡಿ</th></tr>
<tr><td></td><td>9</td><td>9</td><td>9</td><td>9</td><td>9</td></tr>
</table>
ಮತ್ತು ಇದರ ಬರವಣಿಗೆ ಕ್ರಮವನ್ನು ತಿಳಿಸುವರು.
<table>
<tr><th>ಲಕ್ಷ</th><th>ಹತ್ತು ಸಾವಿರ</th><th>ಸಾವಿರ</th><th>ನೂರು</th><th>ಹತ್ತು</th><th>ಬಿಡಿ</th></tr>
<tr><td>1</td><td>0</td><td>0</td><td>0</td><td>0</td><td></td></tr>
</table>
0–9ರವರೆಗಿನ ಮಿಂಚುಪಟ್ಟಿ ಬಳಸಿ ಲಕ್ಷದವರೆಗಿನ ಸ್ಥಾನಬೆಲೆ ಕಲ್ಪನೆ ನೀಡುವುದು. ಇದೇ ರೀತಿ ಹತ್ತು ಲಕ್ಷದ ಸ್ಥಾನ ಬೆಲೆಗಳ ಕಲ್ಪನೆ ನೀಡುವರು.</td></tr>
<tr><td>30 ನಿ</td><td>* ಆರೋಗ್ಯಕರ ಅಭ್ಯಾಸಗಳ ಚಿತ್ರಪಟ<br>* ಯೋಗಾ ಸನದ ಚಿತ್ರಪಟ</td><td>ಶಿಕ್ಷಕರು</td><td>* ಆಟಗಳನ್ನು ಆಡುವುದರಿಂದ ಆಗುವ ಪ್ರಯೋಜನಗಳನ್ನು ಮಕ್ಕಳಿಗೆ ಸವಿವರವಾಗಿ ತಿಳಿಸಿಕೊಡುವರು.<br>* ನಿತ್ಯ ಜೀವನದ ದೈನಂದಿನ ಅಭ್ಯಾಸಗಳಾದ ಸ್ವಚ್ಛತೆ, ಸ್ನಾನ, ಶುಚಿತ್ವಗಳ ಬಗ್ಗೆ ಅರಿವು ಮೂಡಿಸುವರು.</td><td>ಹಿರೇಮಣಿ</td><td>* ಮಿಂಚುಪಟ್ಟಿಗಳ ಸಹಾಯದಿಂದ ಸ್ಥಾನಬೆಲೆಗನುಗುಣವಾಗಿ ಅಂಕೆಗಳನ್ನು ಜೋಡಿಸಿ ಗುಂಪುಗಳಲ್ಲಿ ಓದುತ್ತಾ ತಮ್ಮ ನೋಟ್ ಪುಸ್ತಕದಲ್ಲಿ ಬರೆದುಕೊಳ್ಳುವರು.<br>* ಮಕ್ಕಳಿಗೆ ಬಸ್ ಚೀಟಿಗಳನ್ನು ಮತ್ತು ಮನೆಯಲ್ಲಿನ ವಿದ್ಯುತ್ ಬಿಲ್‌ಗಳನ್ನು ತರಲು ಸೂಚಿಸುವರು.<br>* ಸ್ಥಾನಬೆಲೆ ಬೋರ್ಡ್ ಮೇಲೆ ಕಾಳುಗಳನ್ನು ಹಾಕಿ ಯಾವ ಸ್ಥಾನದಲ್ಲಿ ಎಷ್ಟು ಕಾಳು ಬಿದ್ದಿರುತ್ತವೋ ಅದಕ್ಕನುಗುಣವಾಗಿ ಸಂಖ್ಯೆ ಬರೆದು ಓದುವರು.</td></tr>
</table>

| ಅವಧಿ | ಸಮಯ ಹಂಚಿಕೆ | ಮೂರನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಐದನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 3ನೇ ಅವಧಿ | 20 ನಿ | ಪರಿಸರ ಅಧ್ಯಯನ.<br>* ಜೀವಿಗಳು ಮತ್ತು ನಿರ್ಜೀವಿಗಳು | * ಸುತ್ತಲೂ ಇರುವ ವಸ್ತುಗಳನ್ನು ಗಮನಿಸುವರು.<br>* ಸಜೀವ ಮತ್ತು ನಿರ್ಜೀವ ವಸ್ತುಗಳ ವಿಂಗಡಣೆ ಕಲಿಯುವರು. | * ಚಿತ್ರಪಟ<br>* ಮಿಂಚುಪಟ್ಟಿ<br>* ರೋಲಿಂಗ್ ಚಿತ್ರಪಟ<br>* ರುಂಡ ಮುಂಡ ಜೋಡಣೆ ಚಕ್ರ | ಶಿಕ್ಷಕರು | **ಪೂರ್ವಸಿದ್ಧತಾ ಚಟುವಟಿಕೆ**<br>* ಮಕ್ಕಳನ್ನು ವೃತ್ತಾಕಾರವಾಗಿ ನಿಲ್ಲಿಸಿ ಪ್ರಾಣಿ, ಪಕ್ಷಿ, ಕೀಟ– ಆಟವನ್ನು ಆಡಿಸುವರು. | | | | | |
| | 40 ನಿ | | | | ಶಿಕ್ಷಕರು | * ಜೀವಿಗಳಿಗೆ ಹಾಗೂ ನಿರ್ಜೀವಿಗಳಿಗೆ ಇರುವ ಗುಣಲಕ್ಷಣಗಳನ್ನು ತಿಳಿಯುತ್ತಾ ಕೊಡಲಾದ ಚಿತ್ರಗಳನ್ನು ಸಜೀವಿ, ನಿರ್ಜೀವಿಗಳಾಗಿ ವಿಂಗಡಿಸುವ ವಿಧಾನ ತಿಳಿಸುವರು.<br>* ಜೀವಿಗಳು ಬೆಳೆಯುತ್ತವೆ ಅವುಗಳಿಗೆ ಆಹಾರಬೇಕು, ಅವು ಉಸಿರಾಡುತ್ತವೆ ಹಾಗೂ ತಮ್ಮನ್ನೇ ಹೋಲುವ ಜೀವಿಗಳಿಗೆ ಜನ್ಮ ನೀಡುತ್ತವೆಂಬ ಅಂಶಗಳನ್ನು ಸ್ಪಷ್ಟವಾಗಿ ತಿಳಿಸುವರು. | | | | | |
| | 20 ನಿ | | | | ಶಿಕ್ಷಕರು | * ಚಿತ್ರ ಹಾಗೂ ಪದಗಳ ಹೊಂದಾಣಿಕೆ<br>* ಜೀವಿ ಮತ್ತು ಲಕ್ಷಣಗಳ ಹೆಸರು ಹೊಂದಾಣಿಕೆ ಚಟುವಟಿಕೆ.<br>* ಅಂಗಗಳ ಹೊಂದಾಣಿಕೆಯ ಚಿತ್ರ.<br>ಅಂಗಗಳ ಚಿತ್ರ ಹೊಂದಾಣಿಕೆ ಮಾಡಿಸುವರು.<br> | | | | | |

5ನೇ ತರಗತಿ
4ನೇ ತರಗತಿಯೊಂದಿಗೆ
ಹೊಂದಾಣಿಕೆಯಾಗಿರುತ್ತದೆ

| ಅವಧಿ | ಸಮಯ ಹಂಚಿಕೆ | ಮೂರನೇ ತರಗತಿ<br>ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಐದನೇ ತರಗತಿ<br>ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 4ನೇ ಅವಧಿ | 20 ನಿ | ಪೂರ್ಣಾಂಕಗಳು<br>ಸಂಖ್ಯಾ ಸೂಚಕಗಳು | * 1– 999ರ ವರೆಗಿನ ಸಂಖ್ಯೆಗಳ ಎಣಿಕೆ, ಓದುವುದು ಬರೆಯುವುದು. | ಪಠ್ಯದಲ್ಲಿರುವ ಚಿತ್ರಗಳು | ಶಿಕ್ಷಕರು | ಹಿಂದಿನ ತರಗತಿಯಲ್ಲಿ ಶಿಕ್ಷಕರು ಬೋಧಿಸಿದ ಅಂಕೆಗಳ ಸ್ಥಾನಬೆಲೆ ಮಿಂಚುಪಟ್ಟಿಗಳನ್ನು ನೀಡಿ 1000ದ ವರೆಗೆ ಕಡ್ಡಿಗಳ ಮತ್ತು ಮಣಿ ಕಟ್ಟಿನಿಂದ ಸಂಖ್ಯೆಗಳ ರಚನೆ ಮತ್ತು ಬರವಣಿಗೆ ಮಾಡಿಸುವರು. | | | | | |
| | 20 ನಿ | | | | ಶಿಕ್ಷಕರು | * ಸಂಖ್ಯಾರೇಖೆಯ ಸಹಾಯದಿಂದ ಸಂಖ್ಯೆಗಳ ಏರಿಕೆಗಳಿಗನುಗುಣವಾಗಿ ಕಪ್ಪು ಹಲಗೆಯ ಮೇಲೆ ಬರೆದು ಸ್ಥಾನ ಬೆಲೆ ಕಲ್ಪನೆ ನೀಡುವರು.<br>ಉದಾ :<br>0 100 200 300 400 500 600 700 800<br>* 101 ರಿಂದ 200ರವರೆಗೆ ಅನುಕ್ರಮ ಸಂಖ್ಯೆಗಳನ್ನು ಓದಿ ಅರ್ಥೈಸಿ ಬರೆಯಲು ಹೇಳುವರು. | | | | | |
| | 40 ನಿ | ಸಾ.ಉ.ಉ.ಕಾ | ನಿರುಪಯುಕ್ತ ವಸ್ತು ಬಳಕೆ ಹಾಗೂ ಸೃಜನಶೀಲತೆಯನ್ನು ಬೆಳೆಸಿಕೊಳ್ಳುವರು. | ತೆಂಗಿನ ಗರಿಯ ಕಡ್ಡಿಗಳು<br>ಸೆಣಬಿನ ಹುರಿ | ಶಿಕ್ಷಕರು | ಶಿಕ್ಷಕರು ಮಕ್ಕಳಿಗೆ ನಿರುಪಯೋಗಿ ವಸ್ತುಗಳ ಬಳಕೆಯಿಂದಾಗುವ ಪ್ರಯೋಜನಗಳ ಬಗ್ಗೆ ತಿಳಿಸುವರು. ಪ್ರಾಯೋಗಿಕವಾಗಿ ಪೊರಕೆ ತಯಾರಿಕೆ ಮಾಡಿಸುವರು.<br>ವಿಧಾನ : ತೆಂಗಿನಗರಿಯ ಕಡ್ಡಿಗಳನ್ನು ಒಂದೊಂದಾಗಿ ಜೋಡಿಸಿ ದಪ್ಪ ಭಾಗವನ್ನು ಹಿಡಿಯಾಗಿ ಕಟ್ಟಿಕೊಂಡು ದಾರದ ಮೂಲಕ ಬಿಗಿಯಾಗಿ ಕಟ್ಟಿ ಸಮನಾಗಿ ಕತ್ತರಿಸಿ ಪೊರಕೆ ತಯಾರಿಸುವ ಬಗ್ಗೆ ಮಾಹಿತಿ ನೀಡಿ ಮಕ್ಕಳಿಂದ ಮಾಡಿಸುವರು. | | | | | |

5ನೇ ತರಗತಿ
4ನೇ ತರಗತಿಯೊಂದಿಗೆ
ಹೊಂದಾಣಿಕೆಯಾಗಿರುತ್ತದೆ

| ಅವಧಿ | ಸಮಯ ಹಂಚಿಕೆ | ಮೂರನೇ ತರಗತಿ |  |  |  |  | ಐದನೇ ತರಗತಿ |  |  |  |  |
|---|---|---|---|---|---|---|---|---|---|---|---|
|  |  | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1ನೇ ಅವಧಿ | 20 ನಿ | ಕನ್ನಡ<br>ಬಾವಿಯಲ್ಲಿ ಚಂದ್ರ (ಮುಂದುವರೆದುದು) | *ಕಥನಗಳು, ವಿವರಣೆಗಳು, ಪದಬಂಧಗಳ ಮತ್ತು ಒಗಟುಗಳನ್ನು ಆಲಿಸುವುದರೊಂದಿಗೆ ಅರ್ಥಮಾಡಿಕೊಳ್ಳುವುದು. | ಒಗಟುಗಳ ಸಂಗ್ರಹ | ಹಿರೇಮಣಿ | * ಮಕ್ಕಳು ಪಠ್ಯದಲ್ಲಿ ನೀಡಿರುವ ಚಿತ್ರನೋಡಿ ಪದ ಬರೆ ಚಟುವಟಿಕೆ ಮಾಡಿಸುವರು.<br>* ಮಕ್ಕಳಿಗೆ ತಿಳಿದಿರುವ ಒಗಟು ಬಿಡಿಸುವ ಸ್ಪರ್ಧೆಯನ್ನು ಏರ್ಪಡಿಸುವರು. | ಕನ್ನಡ<br>ಕವನ | * ಚರ್ಚೆ ಹಾಗೂ ......................................<br>* ಕೈ ಬರಹ ಹಾಗೂ .................................<br>* ಸರಳವಾಗಿ, ಸ್ಪಷ್ಟವಾಗಿ .......................... | ಗ್ರಂಥಾಲಯದ ಪುಸ್ತಕಗಳು | ಶಿಕ್ಷಕರು | * ಕನ್ನಡ–ನಾಡು. ನುಡಿಯ ಬಗ್ಗೆ ಚರ್ಚೆ ಮಾಡಿಸುವರು.<br>* ಗ್ರಂಥಾಲಯದಲ್ಲಿರುವ, "ಕಿಂದರ ಜೋಗಿ, "ಮೂರು ಕರಡಿಗಳು" ಪುಸ್ತಕವನ್ನು ನೀಡಿ ಗುಂಪುಗಳಲ್ಲಿ ಓದಲು ತಿಳಿಸುವರು. |
|  | 20 ನಿ |  |  | ಪದಬಂಧದ ಚಾರ್ಟ್ | ಶಿಕ್ಷಕರು | * ಪದಬಂಧವನ್ನು ಕಪ್ಪುಹಲಗೆಯ ಮೇಲೆ ಹಾಕಿ ಕೆಲವು ಸುಳಿವು ನೀಡಿ ಪದಗಳ ರಚನೆ ಮಾಡಲು ನೀಡುವರು.<br>* ಪದ್ಯವನ್ನು ಕಂಠ ಪಾಠ ಮಾಡಲು ತಿಳಿಸುವರು. |  |  |  | ಹಿರೇಮಣಿ | **ಮಕ್ಕಳಿಂದ ಮೌಲ್ಯಮಾಪನ**<br>ಕನ್ನಡ ನಾಡು–ನುಡಿಯ ಬಗ್ಗೆ ತಮ್ಮದೇ ಆದ ವಾಕ್ಯಗಳಲ್ಲಿ ಮೆಚ್ಚುಗೆಯ ಮಾತುಗಳನ್ನು ಹೇಳಿಸುವರು ಅಭ್ಯಾಸದಲ್ಲಿ ಕೆಲವು ಪ್ರಶ್ನೆಗಳಿಗೆ ಉತ್ತರಿಸುವರು. |
|  | 20 ನಿ |  |  |  | ಹಿರೇಮಣಿ | * ಒಗಟು ಸಂಗ್ರಹಪಟ್ಟಿ ತಯಾರಿಸುವುದಾಗಿ ತಿಳಿಸುವರು.<br>* ಪಠ್ಯದಲ್ಲಿನ ಚಿತ್ರ ಗಮನಿಸಿ ಅದರಲ್ಲಿ ಕಾಣುವ ದೃಶ್ಯವನ್ನು ಹೇಳಲು ತಿಳಿಸುವರು. | ಜೀವನ ವಿಜ್ಞಾನ<br>ಸಹಕಾರ | * ನಿತ್ಯ ಜೀವನದ ವ್ಯವಹಾರಗಳಲ್ಲಿ ಪರಸ್ಪರ ವ್ಯಕ್ತಿಗಳ ಮತ್ತು ಪ್ರಾಣಿ ಪಕ್ಷಿಗಳ ನಡುವಿನ ಸಹಕಾರದ ಸಂಬಂಧಗಳ ಬಗ್ಗೆ ನಿದರ್ಶನ ನೀಡುವುದು. | ನೀರು, ಬಕೆಟ್, ಲೋಟ | ಶಿಕ್ಷಕರು | ಮಕ್ಕಳನ್ನು ವೃತ್ತಾಕಾರವಾಗಿ ನಿಲ್ಲಿಸಿ ಶಿಕ್ಷಕರು ಮಕ್ಕಳ ಸಂಖ್ಯೆಗೆ ಅನುಗುಣವಾಗಿ 2 ಭಾಗಗಳನ್ನಾಗಿ ವಿಂಗಡಿಸಿಕೊಂಡು ಎರಡು ಗುಂಪು ಎದುರು ಬದರಾಗಿ ಸಾಲಾಗಿ ನಿಲ್ಲಿಸಿ ನೀರು ತುಂಬುವ ಆಟವನ್ನು ಆಡಿಸುವರು.<br>ಒಂದು ಬದಿಯಲ್ಲಿ ನೀರಿನ ಬಕೆಟ್ ಇಟ್ಟು. ಮೊದಲಿನ ಮಗು ಬೊಗಸೆಯಲ್ಲಿ ನೀರನ್ನು ಹಿಡಿದು ಪಕ್ಕದ ಮಗುವಿನ ಕೈಗೆ ನೀಡುವರು ಹೀಗೆ ಮುಂದುವರೆಯುತ್ತಾ ಕೊನೆಗೆ ಒಂದು ಗ್ಲಾಸ್‌ನಲ್ಲಿ ನೀರು ತುಂಬುವುದಾಗಿ ಸೂಚಿಸಿ ಆಟ ಆಡಿಸುವರು.<br>ಹೀಗೆ ಪರಸ್ಪರ ಸಹಕಾರದಿಂದ ತಮ್ಮ ಗುರಿ ತಲುಪಲು ಸಹಕಾರ ಮನೋಭಾವನೆ ಎಂಬುದನ್ನು ತಿಳಿಸುವರು.<br>ಯಾವ ತಂಡದ ವಿದ್ಯಾರ್ಥಿಗಳು ಮೊದಲು ಲೋಟ ತುಂಬಿಸುವವರೋ ಆ ತಂಡ ವಿಜೇತ ತಂಡ<br> |
|  | 40 ನಿ |  |  | ಗ್ರಂಥಾಲಯದ ಪುಸ್ತಕಗಳು | ಹಿರೇಮಣಿ | * ಒಗಟುಗಳನ್ನು ಸಂಗ್ರಹಿಸುವರು. |  |  |  |  |  |

| ಅವಧಿ | ಸಮಯ ಹಂಚಿಕೆ | ಮೂರನೇ ತರಗತಿ: ವಿಷಯ ಮತ್ತು ಘಟಕದ ಹೆಸರು | ಸಾಮರ್ಥ್ಯಗಳು | ಬೇಕಾಗುವ ಕಲಿಕೋಪಕರಣಗಳು | ಸಂಪನ್ಮೂಲ | ಕಲಿಕಾ ಪ್ರಕ್ರಿಯೆ | ಐದನೇ ತರಗತಿ: ವಿಷಯ ಮತ್ತು ಘಟಕದ ಹೆಸರು | ಸಾಮರ್ಥ್ಯಗಳು | ಬೇಕಾಗುವ ಕಲಿಕೋಪಕರಣಗಳು | ಸಂಪನ್ಮೂಲ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 2ನೇ ಅವಧಿ | 40 ನಿ | ಜೀವನ ವಿಜ್ಞಾನ<br>ಆರೋಗ್ಯಕರ ಅಭ್ಯಾಸಗಳು | * ಆರೋಗ್ಯಕರ ಅಭ್ಯಾಸಗಳಲ್ಲಿ ಸ್ವಚ್ಛತಾ ಉಪಕರಣಗಳ ಪಟ್ಟಿ | * ಚಿತ್ರಪಟಗಳು | ಶಿಕ್ಷಕರು ಮತ್ತು ನರ್ಸ್ (ದಾದಿಯರು) | * ಆರೋಗ್ಯ ಇಲಾಖೆಯ ಆರೋಗ್ಯ ಸಹಾಯಕಿಯರನ್ನು ಶಾಲೆಗೆ ಕರೆಸಿ ಆರೋಗ್ಯಕರ ಅಭ್ಯಾಸಗಳನ್ನು ರೂಢಿಸಿಕೊಳ್ಳಲು ಬೇಕಾದ ಸ್ವಚ್ಛತಾ ವಿಧಾನ ಹಾಗೂ ಸ್ವಚ್ಛತಾ ಸಾಮಗ್ರಿಗಳ ಬಗ್ಗೆ ಮಾಹಿತಿ ಕೊಡಿಸುವರು.<br>ಉದಾ : ಹಲ್ಲುಜ್ಜುವ ಬ್ರಷ್, ಮೈ ತೊಳೆಯುವ ಬ್ರಷ್‌ಗಳು. ಸಾಬೂನು ಮುಂತಾದವುಗಳ ಬಳಕೆಯ ಬಗ್ಗೆ ತಿಳಿಸುವುದು ಹಾಗೂ ಸ್ವಚ್ಛತಾ ಬಟ್ಟೆ ಧರಿಸುವ ಬಗ್ಗೆ ತಿಳಿಸುವುದು. | ಗಣಿತ<br>ಸಂಖ್ಯೆಗಳು (ಮುಂದುವರದುದು) | 5,6,7 ಅಂಕಿಗಳನ್ನೊಳಗೊಂಡ ಸಂಖ್ಯೆಗಳ ಸ್ಥಾನ ಬೆಲೆ ಓದುವುದು, ಬರೆಯುವುದು | * ಬಸ್ ಚೀಟಿಗಳು<br>* ವಿದ್ಯುತ್ ಬಿಲ್‌ಗಳು<br>* ಹಳೆಯ ಕ್ಯಾಲೆಂಡರ್<br>ಬೆಂಕಿಪಟ್ಟಿಗೆ<br>ಮಿಂಚು ಪಟ್ಟಿ | ಹಿರೇಮಣಿ | * ಹಿಂದಿನ ತರಗತಿಯಲ್ಲಿ ತಿಳಿಸಿದಂತೆ ತಂದಂತಹ ಬಸ್ ಚೀಟಿ, ವಿದ್ಯುತ್ ಬಿಲ್ ಸಂಖ್ಯೆಗಳನ್ನು ಅಕ್ಷರದಲ್ಲಿ ಬರೆಯಲು ಮತ್ತು ಸ್ಥಾನಬೆಲೆಗೆ ಅನುಗುಣವಾಗಿ ಬರೆದು ಓದಲು ತಿಳಿಸುವರು.<br>* ಪ್ರತಿ ಮಗುವಿಗೂ ಹತ್ತು ಅಂಕಿ ಮಿಂಚುಪಟ್ಟಿಗಳನ್ನು ಕೊಟ್ಟು 7 ಅಂಕಿಗಳುಳ್ಳ ಸಂಖ್ಯೆಗಳನ್ನು ರಚಿಸಲು ತಿಳಿಸುವರು. |
| | 40 ನಿ | ಸಾ.ಉ.ಉ.ಕಾ<br>ಬಳೆ ಚೂರುಗಳಿಂದ ಮಾದರಿ ತಯಾರಿಕೆ | * ಅನುಪಯುಕ್ತ ವಸ್ತುಗಳ ಬಳಕೆ | * ಡ್ರಾಯಿಂಗ್ ಶೀಟ್<br>* ಬಳೆ ಚೂರುಗಳು<br>* ಮರಳು<br>* ಗೋಂದು (ಅಂಟು) | ಶಿಕ್ಷಕರು | ಶಿಕ್ಷಕರು ಪ್ರತಿ ಮಗುವಿಗೂ 1/12 ಸೈಜಿನ (1 ಡ್ರಾಯಿಂಗ್ ಶೀಟ್‌ನ್ನು 12 ಸಮಭಾಗ ಮಾಡುವುದು) ಡ್ರಾಯಿಂಗ್ ಶೀಟನ್ನು ನೀಡಿ ಮಕ್ಕಳನ್ನು ವೃತ್ತಾಕಾರವಾಗಿ ಕೂರಿಸುವುದು. ಮಧ್ಯದಲ್ಲಿ ಬಳೆಯ ಚೂರು ಹಾಗೂ ಮರಳು ಮತ್ತು ಅಂಟನ್ನು ಇಡುವರು. ಅವುಗಳಿಂದ ವಿವಿಧ ಆಕೃತಿಗಳನ್ನು ರಚಿಸಬಹುದೆಂದು ತಿಳಿಸಿ ಮಾದರಿಯಾಗಿ 1ನ್ನು ಮಾಡಿಸಿ ತೋರಿಸುವರು. ಮಕ್ಕಳು ಅದೇ ರೀತಿಯಲ್ಲಿ ಮಾಡುವರು.<br> | ಕೇಳಿ-ಕಲಿ | ------ ಕೇಳಿ-ಕಲಿ ಪಾಠ ಕೇಳಿಸುವುದು ------ | | ಹಿರೇಮಣಿ | |

| ಅವಧಿ | ಸಮಯ ಹಂಚಿಕೆ | ಮೂರನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಐದನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 3ನೇ ಅವಧಿ | 40 ನಿ | ಗಣಿತ<br>ಪೂರ್ಣಾಂಕಗಳು ಮತ್ತು ಸಂಖ್ಯಾ ಸೂಚಕಗಳು | 1–999ರವರೆಗಿನ, ಎಣಿಕೆ, ಓದುವುದು, ಬರೆಯುವುದು. | ಕಡ್ಡಿಗಳ ಕಟ್ಟುಗಳು<br>ಸ್ಥಾನಬೆಲೆ ಕೋಷ್ಟಕ | ಶಿಕ್ಷಕರು | * ಚಿತ್ರ ಮತ್ತು ಮಣಿಕಟ್ಟಿನ ಸಹಾಯದಿಂದ ಸಂಖ್ಯೆಯನ್ನು ಕಲಿಸುವರು.<br>* ಕಡ್ಡಿಗಳ ಕಟ್ಟುಗಳನ್ನು ನೀಡಿ ಹತ್ತರ ಹತ್ತು ಕಟ್ಟುಗಳನ್ನು ಸೇರಿಸಿ 100, 100ರ 5 ಕಟ್ಟುಗಳ ಸೇರಿಸಿ 500 ಹೀಗೆ ಕಡ್ಡಿಗಳ ಕಟ್ಟಿನಿಂದ ಮಕ್ಕಳಿಗೆ ಸ್ಥಾನಬೆಲೆ ಕಲ್ಪನೆ ನೀಡುತ್ತ ಓದಲು ಮತ್ತು ಬರೆಯಲು ಸೂಚಿಸುವರು.<br><br>100 + 100 + 100 = 300<br>ಇದೇ ರೀತಿ ಚಟುವಟಿಕೆ ಮುಂದುವರಿಸಲು ಸೂಚಿಸುವರು. | | | 5ನೇ ತರಗತಿ 4ನೇ ತರಗತಿಯೊಂದಿಗೆ ಹೊಂದಾಣಿಕೆಯಾಗಿರುತ್ತದೆ | | |
| | 40 ನಿ | | | | ಶಿಕ್ಷಕರು | ಕೇಳಿ–ಕಲಿ ಕಾರ್ಯಕ್ರಮದ ಪಾಠ ಕೇಳಿಸುವರು. | | | | | |

| ಅವಧಿ | ಸಮಯ ಹಂಚಿಕೆ | ಮೂರನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಮೂರನೇ ತರಗತಿ: ಸಾಮರ್ಥ್ಯದ ವಿವರ | ಮೂರನೇ ತರಗತಿ: ಬಳಸ ಬಹುದಾದ ಕಲಿಕಾ ಸಾಮಗ್ರಿ | ಮೂರನೇ ತರಗತಿ: ನಿರ್ವಹಣೆ | ಮೂರನೇ ತರಗತಿ: ಕಲಿಕಾ ಪ್ರಕ್ರಿಯೆ | ಐದನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಐದನೇ ತರಗತಿ: ಸಾಮರ್ಥ್ಯದ ವಿವರ | ಐದನೇ ತರಗತಿ: ಬಳಸ ಬಹುದಾದ ಕಲಿಕಾ ಸಾಮಗ್ರಿ | ಐದನೇ ತರಗತಿ: ನಿರ್ವಹಣೆ | ಐದನೇ ತರಗತಿ: ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 4ನೇ ಅವಧಿ | 20 ನಿ | | | | ಶಿಕ್ಷಕರು | **ಪೂರ್ವ ಸಿದ್ಧತಾ ಚಟುವಟಿಕೆ :** ಶಿಕ್ಷಕರು ಮಕ್ಕಳನ್ನು ವೃತ್ತಾಕಾರವಾಗಿ ನಿಲ್ಲಿಸಿ, 'ಪ್ರಾಣಿ, ಪಕ್ಷಿ, ಕೀಟ' ಆಟವನ್ನು ಆಡಿಸುವರು. | 5ನೇ ತರಗತಿ 4ನೇ ತರಗತಿಯೊಂದಿಗೆ ಹೊಂದಾಣಿಕೆಯಾಗಿರುತ್ತದೆ | | | | |
| | 60 ನಿ | **ಪರಿಸರ ಅಧ್ಯಯನ**<br>*** ಜೀವಿಗಳು ಮತ್ತು ನಿರ್ಜೀವಿಗಳು** | * ಸುತ್ತಲೂ ಇರುವ ವಸ್ತುಗಳನ್ನು ಗಮನಿಸುವರು.<br>* ಸಜೀವ ಮತ್ತು ನಿರ್ಜೀವ ವಸ್ತುಗಳ ವಿಂಗಡಣೆ ಮಾಡುವರು. | * ಚಿತ್ರಪಟ<br>* ಮಿಂಚು ಪಟ್ಟಿಗಳು<br>* ರೋಲಿಂಗ್ ಚಾರ್ಟ್ಸ್ | ಶಿಕ್ಷಕರು | **ಕಲಿಕಾ ಚಟುವಟಿಕೆ :** ಪಠ್ಯದಲ್ಲಿ ನೀಡಿರುವ ಚಿತ್ರದೊಂದಿಗೆ ಇರುವ ವಿವರಣೆಯನ್ನು ಚಟುವಟಿಕೆಯ ಮೂಲಕ ವಿವರಿಸುತ್ತಾ ಮಕ್ಕಳಿಗೆ ಸರಳ ಪ್ರಶ್ನೆಗಳನ್ನು ಕೇಳುತ್ತಾ ಸಜೀವಿಗಳ ಲಕ್ಷಣಗಳನ್ನು ತಿಳಿಸುವರು.<br>* ಎಲ್ಲಾ ಜೀವಿಗಳಿಗೂ ಆಹಾರ ಬೇಕು, ಎಂಬುದನ್ನು ಚಿತ್ರ ಸಹಿತ ವಿವರಣೆ ನೀಡುವರು.<br>* ಜೀವಿಗಳು ಉಸಿರಾಡುತ್ತವೆ.<br>* ಜೀವಿಗಳು ತಮ್ಮನ್ನೇ ಹೋಲುವ ಜೀವಿಗಳಿಗೆ ಜನ್ಮ ನೀಡುತ್ತವೆ ಎಂಬುದನ್ನು ಉದಾ. ಯೊಂದಿಗೆ ಚಿತ್ರ ಸಹಿತ ವಿವರಣೆ ನೀಡುವರು.<br>* ಜೀವಿಗಳು ಮತ್ತು ನಿರ್ಜೀವಿಗಳಿಗೂ ಇರುವ ವ್ಯತ್ಯಾಸಗಳನ್ನು ತಿಳಿಸುವರು. | | | | | |

| | | ಮೂರನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1ನೇ ಅವಧಿ | 10 ನಿ | **ಕನ್ನಡ**<br>**ಬಾವಿಯಲ್ಲಿ ಚಂದ್ರ (ಮುಂದುವರೆದುದು)** | * ಕಥನಗಳು, ವಿವರಣೆಗಳು ಹಾಗೂ ಪದಬಂಧಗಳು ಮತ್ತು ಒಗಟುಗಳನ್ನು ಆಲಿಸುವುದರೊಂದಿಗೆ ಅರ್ಥಮಾಡಿಕೊಳ್ಳುವುದು. | ಪದಬಂಧ<br>ಪ್ರಶ್ನಾವಳಿ ಕಾರ್ಡುಗಳು | ಹಿರೇಮಣಿ | **ಪೂ.ಸಿ. ಚಟುವಟಿಕೆ**<br>ಮಕ್ಕಳಿಂದ ಪದ್ಯದ ಮೊದಲ ಮೂರು ನುಡಿಗಳನ್ನು ಕಂಠಪಾಠ ಮಾಡಿದ್ದನ್ನು ಹೇಳಿಸುವರು. | **ಕನ್ನಡ**<br>**ಪಂಜೆಮಂಗೇಶರಾಯರು** | * ಚರ್ಚೆ ಹಾಗೂ ನಾಟಕಗಳನ್ನು ಆಲಿಸುವುದರೊಂದಿಗೆ ಅರ್ಥಮಾಡಿಕೊಳ್ಳುವರು.<br>* ಕೈಬರಹ ಹಾಗೂ ಸಣ್ಣಕಥೆ ಮತ್ತು ಮಕ್ಕಳ ಸಾಹಿತ್ಯವನ್ನು ನಿರರ್ಗಳವಾಗಿ ಓದುವುದು.<br>* ಸರಳವಾಗಿ ಸ್ಪಷ್ಟವಾಗಿ ಸರಿಯಾದ ಕ್ರಮದಲ್ಲಿ ಬರೆಯುವುದು. | ಕನ್ನಡ ಕವಿಗಳ ಚಿತ್ರಪಟಗಳು | ಶಿಕ್ಷಕರು | **ಕ.ಪೂ. ಚಟುವಟಿಕೆ**<br>ಮಕ್ಕಳಿಗೆ ಕನ್ನಡ ಕವಿಗಳ ಚಿತ್ರಪಟಗಳನ್ನು ತೋರಿಸುತ್ತಾ ಕನ್ನಡಕ್ಕಾಗಿ ಅವರು ನೀಡಿದ ಕೊಡುಗೆಗಳ ಬಗ್ಗೆ ಮಾಹಿತಿ ನೀಡುವರು. |
| | 10 ನಿ | | | | ಹಿರೇಮಣಿ | **ಮೌಲ್ಯಮಾಪನ ಚಟುವಟಿಕೆ**<br>* ಅಭ್ಯಾಸ ಮಾಡಿದ ಕವನವನ್ನು ಬರೆಯುವರು.<br>* ಚಿಕ್ಕ ಚಿಕ್ಕ ಪ್ರಶ್ನೆಗಳಿಗೆ ಉತ್ತರಿಸಲುಮತ್ತು ನೀಡಿದ ಪದಬಂಧವನ್ನು ಪೂರ್ಣಗೊಳಿಸಲು ಸಹಾಯ ಮಾಡುವರು. | | | ಏಕಲವ್ಯ ನಾಟಕದ ಧ್ವನಿಸುರುಳಿ | ಶಿಕ್ಷಕರು | ಮಕ್ಕಳು ಅಭಿನಯಿಸಿದ ಏಕಲವ್ಯ (ಸ್ಥಳೀಯವಾಗಿ ಇರುವ ನಾಟಕದ ಕ್ಯಾಸೆಟ್) ಕ್ಯಾಸೆಟ್‌ನ್ನು ಮಕ್ಕಳಿಗೆ ಕೇಳಿಸುವುದರೊಂದಿಗೆ ಸನ್ನಿವೇಶವನ್ನು ವಿವರಿಸುವರು. |
| | 20 ನಿ | | | | ಶಿಕ್ಷಕ | ಮಕ್ಕಳಿಗೆ ಪಠ್ಯದಲ್ಲಿನ ಪ್ರಶ್ನೆಗಳಿಗೆ ಉತ್ತರಿಸಲು ಮತ್ತು ಬಿಟ್ಟ ಸ್ಥಳಗಳನ್ನು ತುಂಬಲು ಹೇಳುವರು. | | | ಅಂಚೆ ಕಾರ್ಡ್‌ಗಳು ಮತ್ತು ವೃತ್ತ ಪತ್ರಿಕೆಗಳು | ಹಿರೇಮಣಿ | **ಚಟುವಟಿಕೆ**<br>* ಮಕ್ಕಳಿಂದ ಕೆಲವು ಅಂಚೆ ಕಾರ್ಡ್‌ನಲ್ಲಿರುವ ಬರವಣಿಗೆಯನ್ನು ಓದಲು ಸಹಾಯ ಮಾಡುವರು.<br>* ಶಾಲಾ ಗ್ರಂಥಾಲಯಕ್ಕೆ ಬರುವ ದೈನಂದಿನ ವೃತ್ತ ಪತ್ರಿಕೆಗಳಲ್ಲಿನ ಶುಭನುಡಿ, ಪದಹಾಸು ಮತ್ತು ಉಚ್ಚಾರಣೆಯ ದೋಷವಿದ್ದಲ್ಲಿ ಅವುಗಳನ್ನು ತಿದ್ದಿ ಹೇಳುವುದರೊಂದಿಗೆ ಎಲ್ಲರೂ ನಿಮ್ಮ ನಿಮ್ಮ ನೋಟ್ ಪುಸ್ತಕದಲ್ಲಿ ಐದೈದು ಸಾಲುಗಳನ್ನು ವೃತ್ತಪತ್ರಿಕೆಯ ಮುಖ್ಯಾಂಶಗಳು ಬರೆದು ತನ್ನಿ ಎಂದು ಸೂಚಿಸುವರು. |
| | 40 ನಿ | | | | ಹಿರೇಮಣಿ | ಸ್ವಂತ ವಾಕ್ಯಗಳನ್ನು ಮಕ್ಕಳು ಬರೆಯುವರು. | **ಜೀವನ ವಿಜ್ಞಾನ**<br>**ಆರೋಗ್ಯಕರ ಅಭ್ಯಾಸಗಳು** | ವೈಯಕ್ತಿಕ ಸ್ವಚ್ಛತೆ ಬಗ್ಗೆ ಅರಿಯುವರು | | ಶಿಕ್ಷಕರು | * ಮಕ್ಕಳನ್ನು ಒಬ್ಬೊಬ್ಬರಾಗಿ ವೀಕ್ಷಿಸುವುದರ ಮೂಲಕ ಅವರಿಗೆ ಸ್ವಚ್ಛತೆಯ ಬಗ್ಗೆ ಮಾಹಿತಿ ನೀಡುವರು.<br>* ಆಟದ ಬಯಲಿಗೆ ಕರೆದೊಯ್ದು ಕೆಲವು ಆಟಗಳನ್ನು ಆಡಿಸುವರು ಅವುಗಳಿಂದಾಗುವ ಪ್ರಯೋಜನವನ್ನು ತಿಳಿಸುವರು.<br>* ಮಕ್ಕಳಿಗೆ ವೈಯಕ್ತಿಕವಾಗಿ ರೂಡಿಸಿಕೊಳ್ಳಬೇಕಾದ ಉತ್ತಮ ಅಭ್ಯಾಸಗಳನ್ನು ಪಟ್ಟಿ ಮಾಡಿ ತಿಳಿಸುವರು. |

| | | ಮೂರನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| **2ನೇ ಅವಧಿ** | 40 ನಿ | **ಗಣಿತ**<br>**ಪೂರ್ಣಾಂಕಗಳು ಮತ್ತು ಸಂಖ್ಯಾ ಸೂಚಕಗಳು** | 1 ರಿಂದ 999ರ ವರೆಗೆ ಎಣಿಕೆ, ಓದುವುದು ಬರೆಯುವುದು. | * ಸ್ಥಾನ ಬೆಲೆಯ ಪಟ್ಟಿ<br>* ಮಣಿಕಟ್ಟು<br>* ಗುಂಡುಗಳು<br>* ಸ್ಥಾನ ಬೆಲೆಯ ಜಾರು ಪಟ್ಟಿ<br>* 10 ಕಡ್ಡಿಗಳ ಕಟ್ಟುಗಳು<br>* 100ರ ಕಡ್ಡಿಗಳ ಕಟ್ಟುಗಳು | ಶಿಕ್ಷಕರು | **ಸ್ಥಾನಬೆಲೆಯ ಜಾರು ಪಟ್ಟಿಯಲ್ಲಿ**<br>ವಿವಿಧ ಅಂಕಿಗಳ ಮಿಂಚುಪಟ್ಟಿ ಜೋಡಿಸುತ್ತಾ, ಕಪ್ಪು ಹಲಗೆಯ ಮೇಲೆ ಬರೆಯುವರು.<br>ನಂತರ ಮಣಿಕಟ್ಟಿನ ಸಹಾಯದಿಂದ ಸಂಖ್ಯೆಗಳನ್ನು ರಚಿಸುವರು. ನಂತರ ಕಡ್ಡಿಗಳ ಕಟ್ಟುಗಳನ್ನು ಬಳಸಿಕೊಂಡು ಸಂಖ್ಯೆಗಳ ರಚನೆ ತಿಳಿಸುವರು.<br>ಉದಾ : 1<br><br><br>ಉದಾ : 2<br>ಸಂಖ್ಯಾ ಜಾರುಪಟ್ಟಿ<br><br><br>ಉದಾ : 3<br>ಕಡ್ಡಿಗಳು<br><br><br>ಮಣಿಕಟ್ಟು | **ಗಣಿತ**<br>**ಸಂಖ್ಯೆಗಳು (ಮುಂದುವರೆಯುವುದು.)** | 5, 6, 7 ಅಂಕಿಗಳನ್ನೊಳಗೊಂಡ ಸಂಖ್ಯೆಗಳ ಸ್ಥಾನಬೆಲೆ ಓದುವುದು. ಬರೆಯುವುದು. | * ಸ್ಥಾನಬೆಲೆ ಕೋಷ್ಟಕ<br>* ಅಂಕಿಗಳ ಮಿಂಚು ಪಟ್ಟಿಗಳು | ಹಿರೇಮಣಿ | ಮಕ್ಕಳಿಗೆ ಸ್ಥಾನಬೆಲೆಯ ಕೋಷ್ಟಕ ನೀಡಿ ಜೊತೆಗೆ ಅಂಕಿಗಳ ಮಿಂಚುಪಟ್ಟಿ ನೀಡಿ ಸ್ಥಾನಬೆಲೆಯ ಕೋಷ್ಟಕದಲ್ಲಿ ಬೇರೆ ಬೇರೆ ಮಿಂಚು ಪಟ್ಟಿಗಳನ್ನು ಇಟ್ಟು ಬೇರೆ ಬೇರೆ ಸಂಖ್ಯೆಗಳ ರಚನೆ ಮಾಡಲು ಹೇಳುವರು. ಯಾರು ಹೆಚ್ಚು ಸಂಖ್ಯೆಗಳನ್ನು ಕೊಟ್ಟಂತಹ ಮಿಂಚು ಪಟ್ಟಿಗಳಲ್ಲಿ ಮಾಡುತ್ತಾರೋ ಅವರಿಗೆ ಪ್ರೋತ್ಸಾಹಿಸುವುದು (ಚಪ್ಪಾಳೆಯ ಮೂಲಕ) |
| | 40 ನಿ | | | | ಹಿರೇಮಣಿ | ಕಡ್ಡಿಗಳ ಕಟ್ಟುಗಳು, ಮಣಿಕಟ್ಟು ಮಿಂಚುಪಟ್ಟಿ, ಅಂಕಿ ಜಾರು ಪಟ್ಟಿಗಳನ್ನು ನೀಡಿ ಎಲ್ಲಾ ಮಕ್ಕಳನ್ನು ನಾಲ್ಕು ತಂಡಗಳಾಗಿ ಮಾಡಿ ಚಟುವಟಿಕೆ ನೀಡುವರು.<br>ಮಕ್ಕಳು ಸಂಖ್ಯೆಗಳನ್ನು ರಚಿಸುವರು. ಪಠ್ಯಪುಸ್ತಕದ 14 ಮತ್ತು 15ನೇ ಪುಟದ ಚಿತ್ರನೋಡಿ ಸಂಖ್ಯೆ ಬರೆಯುವ ಚಟುವಟಿಕೆ ಮಾಡಿಸುವರು. | ಸಾ.ಉ.ಉ.ಕಾ<br>ಆರೋಗ್ಯ ಮತ್ತು ನೈರ್ಮಲ್ಯ | ಪರಿಸರ ಮಾಲಿನ್ಯ ತಡೆಗಟ್ಟುವುದರ ಬಗ್ಗೆ ಮಾಹಿತಿ ಹೊಂದುವರು. | ಚಿತ್ರಗಳು,<br>ಬಿಳಿಹಾಳೆಗಳು,<br>ಕತ್ತರಿ, ಗೋಂದು,<br>ವೃತ್ತಪತ್ರಿಕೆಗಳು. | ಶಿಕ್ಷಕರು | ಮಕ್ಕಳನ್ನು ತರಗತಿಯಲ್ಲಿರುವ ಸಂಖ್ಯೆಗನು ಗುಣವಾಗಿ ಮೂರು (ಗುಂಪು)ಗಳಾಗಿ ವಿಂಗಡಿಸಿ ಪರಿಸರ ಮಾಲಿನ್ಯಕ್ಕೆ ಸಂಬಂಧಿಸಿದಂತೆ ಚಿತ್ರಗಳನ್ನು ಮತ್ತು ಸುದ್ದಿಗಳನ್ನು ಬೇರೆ ಬೇರೆ ಮೂಲಗಳಿಂದ ಕತ್ತರಿಸಿ ಅಂಟಿಸಿ ಆಲ್ಬಮ್ ತಯಾರಿಸುವುದೆಂದು ಸೂಚಿಸುತ್ತ ಸಹಾಯ ಮಾಡುವರು.<br>ಉದಾ : ನೀರನ್ನು ಮಿತವಾಗಿ ಬಳಸಿ. |

| | | ಮೂರನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ವಿಷಯ ಘಟಕ ಉಪಘಟಕ | ಸಾಮರ್ಥ್ಯಗಳು | ಬೋಧನೋಪಕರಣಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಘಟಕ ಉಪಘಟಕ | ಸಾಮರ್ಥ್ಯಗಳು | ಬೋಧನೋಪಕರಣಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 3ನೇ ಅವಧಿ | 40 ನಿ | ಪರಿಸರ ಅಧ್ಯಯನ<br>ಜೀವಿಗಳು ನಿರ್ಜೀವಿಗಳು | * ಸುತ್ತಲೂ ಇರುವ ವಸ್ತುಗಳನ್ನು ಗಮನಿಸುವರು.<br>* ಸಜೀವ ಮತ್ತು ನಿರ್ಜೀವ ವಸ್ತುಗಳ ವಿಂಗಡಣೆಯನ್ನು ತಿಳಿಯುವರು. | | ಶಿಕ್ಷಕರು | **ಮೌಲ್ಯಮಾಪನ ಚಟುವಟಿಕೆ**<br>ಪಠ್ಯದಲ್ಲಿನ ಎಲ್ಲ ಅಭ್ಯಾಸದ ಪ್ರಶ್ನೆಗಳನ್ನು ಮತ್ತು ಚಟುವಟಿಕೆಗಳನ್ನು ಮಾಡಿಸುವರು. | | | | | 5ನೇ ತರಗತಿ 4ನೇ ತರಗತಿಯೊಂದಿಗೆ ಹೊಂದಾಣಿಕೆಯಾಗಿರುತ್ತದೆ |
| | 40 ನಿ | | | | ಶಿಕ್ಷಕರು | * ಮಕ್ಕಳು ತಮ್ಮ ಸುತ್ತಮುತ್ತ ನೋಡಿರುವ ವಸ್ತುಗಳ ಹೆಸರುಗಳನ್ನು ಹೇಳುವರು.<br>* ತಮ್ಮ ಮನೆಯಲ್ಲಿರುವ ಸಾಕು ಪ್ರಾಣಿಗಳ ಹೆಸರುಗಳನ್ನು ಹೇಳುವರು.<br>* ವಿವಿಧ ಪ್ರಾಣಿಗಳ, ಪಕ್ಷಿಗಳ ಧ್ವನಿ ಅನುಕರಣೆ ಮಾಡುವರು.<br>* ಹಿಂದಿನ ಪಾಠದಲ್ಲಿನ ಜೀವಿಗಳ ನಿರ್ಜೀವಿಗಳ ಹೆಸರುಗಳನ್ನು ಪಟ್ಟಿ ಮಾಡುವರು. | | | | | |

# ಗಣಿತ



| ಅವಧಿ | ಸಮಯ ಹಂಚಿಕೆ | ಮೂರನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 4ನೇ ಅವಧಿ | 80 ನಿ | ಚಿತ್ರ ಮಿಂಚುಪಟ್ಟಿ ಮತ್ತು ಸ್ಪ್ರೇ ಪೇಂಟಿಂಗ್ ಮಾಡುವರು.<br>ಸಾ.ಉ.ಉ.ಕಾ. | * ಚಿತ್ರಗಳನ್ನು ಕತ್ತರಿಸಿ ಚಿತ್ರಗಳ ಫ್ಲಾಶ್ ಕಾರ್ಡ್‌ಗಳನ್ನು ರಚನೆ ಮಾಡುವುದು.<br>* ಚಿತ್ರಗಳನ್ನು ಡ್ರಾಯಿಂಗ್ ಸೀಟ್‌ನಲ್ಲಿ ಕತ್ತರಿಸಿ ಸ್ಪ್ರೇ ಪೇಂಟಿಂಗ್ ಮಾಡುವುದು. | * ಡ್ರಾಯಿಂಗ್ ಹಾಳೆಗಳು<br>* ಪ್ರಾಣಿ, ಸಸ್ಯ ನಕ್ಷೆಗಳ ಚಿತ್ರಪಟಗಳು<br>* ಗೋಂದು (ಅಂಟು)<br>* ಕತ್ತರಿ<br>* ಸ್ಕೆಚ್ ಪೆನ್ನುಗಳು<br>* ದ್ರವರೂಪದ ಬಣ್ಣಗಳು<br>* ಡ್ರಾಯಿಂಗ್ ಹಾಳೆಯಲ್ಲಿ ಕತ್ತರಿಸಲಾದ ವಿವಿಧ ಪ್ರಾಣಿ ಸಸ್ಯಗಳ ಆಕೃತಿಗಳು<br>* ಹಲ್ಲು ಉಜ್ಜುವ ಹಳೆಯ ಬ್ರಷ್‌ಗಳು | ಶಿಕ್ಷಕ | * ತರಗತಿಯಲ್ಲಿ ಮಕ್ಕಳನ್ನು ಎರಡು ಗುಂಪು ಮಾಡುವರು.<br>* ½ (ಒಂದು ಡ್ರಾಯಿಂಗ್ ಹಾಳೆಯಲ್ಲಿ 12 ಭಾಗ ಮಾಡಿ) ಸೈಜಿನ ಒಂದೊಂದು ಡ್ರಾಯಿಂಗ್ ಹಾಳೆಯನ್ನು ಪ್ರತಿ ಮಗುವಿಗೆ ಕೊಡುವುದು. ಮತ್ತು ಪ್ರತಿ ಮಗುವಿಗೆ ಒಂದೊಂದು ಪ್ರಾಣಿ ಅಥವಾ ಸಸ್ಯದ ಚಿತ್ರ ಕೊಟ್ಟು ಗಮ್‌ನ ಸಹಾಯದಿಂದ ಡ್ರಾಯಿಂಗ್ ಹಾಳೆಗೆ ಅಂಟಿಸಿ ಸ್ಕೆಚ್ ಪೆನ್ನಿನಿಂದ ಹೆಸರು ಬರೆಯಲು ತಿಳಿಸುವರು.<br>ಸಸ್ಯ  ಬಾತುಕೋಳಿ <br>* ಇನ್ನೊಂದು ಗುಂಪಿನಲ್ಲಿರುವ ಮಕ್ಕಳಿಗೆ $^1/_{12}$ನೇ ಸೈಜಿನ ಡ್ರಾಯಿಂಗ್ ಸೀಟ್, ದ್ರವರೂಪದ ಬಣ್ಣ, ಕತ್ತರಿಸಲಾದ ಪ್ರಾಣಿಗಳ ಆಕೃತಿ ಹಾಗೂ ಹಲ್ಲುಜ್ಜುವ ಹಳೆಯ ಬ್ರಷ್‌ಗಳನ್ನು ನೀಡುವರು. ಪ್ರತಿ ಮಗುವು ತನಗೆ ಕೊಡಲಾದ ಡ್ರಾಯಿಂಗ್ ಸೀಟಿನ ಮೇಲೆ ಚಿತ್ರವನ್ನು ಇಟ್ಟು ಸ್ಪ್ರೇ ಮಾಡಲು ಹೇಳುವರು. ಅವುಗಳ ಮೇಲೆ ವಿದ್ಯಾರ್ಥಿಗಳ ಹೆಸರು ಬರೆದು ಪ್ರದರ್ಶಿಸುವರು.<br> ನವಿಲು | | | | 5ನೇ ತರಗತಿಯು 4ನೇ ತರಗತಿಯೊಂದಿಗೆ ಹೊಂದಾಣಿಕೆಯಾಗಿರುತ್ತದೆ | |

| ಅವಧಿ | ಸಮಯ ಹಂಚಿಕೆ | ಮೂರನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| **1ನೇ ಅವಧಿ** | 20 ನಿ | **ಕನ್ನಡ**<br>**ಉಪಾಯ ಬಲ್ಲವನಿಗೆ ಅಪಾಯವಿಲ್ಲ.** | * ಸ್ವರದಲ್ಲಿ ಸರಿಯಾದ ಏರಿಳಿತ ಮತ್ತು ಅಭಿನಯದ ಮೂಲಕ ಸರಳ ಕಥೆಗಳನ್ನು ವಿವರಿಸುವುದು. | ಹೊಸ ಪದಗಳ ಮಿಂಚುಪಟ್ಟಿ | ಶಿಕ್ಷಕರು | **ಪೂರ್ವಸಿದ್ಧತಾ ಚಟುವಟಿಕೆ**<br>ಮಕ್ಕಳಿಗೆ ಶಿಕ್ಷಕರು ಸಿಂಹ ಮತ್ತು ಮೊಲದ ಕಥೆಯನ್ನು ವಿವರವಾಗಿ ತಿಳಿಸುವರು. | ಕನ್ನಡ<br>ಪಂಜೇಮಂಗೇಶರಾಯರು | * ಸಂವಾದ ಚರ್ಚೆ ಹಾಗೂ ನಾಟಕಗಳನ್ನು ಆಲಿಸುವುದರ ಜೊತೆಗೆ ಅರ್ಥಮಾಡಿಕೊಳ್ಳುವುದು.<br>* ಕೈಬರಹ, ಸಣ್ಣಕಥೆ ಮತ್ತು ಮಕ್ಕಳ ಸಾಹಿತ್ಯವನ್ನು ನಿರರ್ಗಳವಾಗಿ ಓದುವುದು.<br>* ಸರಳವಾಗಿ ಸ್ಪಷ್ಟವಾಗಿ ಸರಿಯಾದ ಕ್ರಮದಲ್ಲಿ ಬರೆಯುವುದು. | | ಶಿಕ್ಷಕರು | 3ನೇ ತರಗತಿಯ ಚಟುವಟಿಕೆಯಲ್ಲಿ ಭಾಗವಹಿಸುವರು. |
| | 20 ನಿ | | | | ಶಿಕ್ಷಕರು | **ಕಲಿಕಾ ಚಟುವಟಿಕೆ (ನೇರ ಬೋಧನೆ)**<br>ಮೊದಲು ಶಿಕ್ಷಕರು ಪಾಠ ಭಾಗವನ್ನು ಮಾದರಿಯಾಗಿ ವಾಚನ ಮಾಡುವರು. ನಂತರ ಮಕ್ಕಳಿಂದ ಓದಿಸುವರು.<br>ತುಂಬಿ ಹರಿಯುತ್ತಿರುವ ನದಿ ..........................................<br>..........................................................................<br>..........................................................................<br>.................................... ಹೀಗೆ ದಿನವೂ ಮಾಡುತ್ತಿತ್ತು. | | | ಹೊಸ ಪದಗಳ ಪಟ್ಟಿ | ಹಿರೇಮಣಿ | ಕನ್ನಡ ಕವನದಲ್ಲಿ ಬರುವಂತಹ ಹೊಸ ಪದಗಳನ್ನು ಗುರುತಿಸಿ ಅವುಗಳ ಅರ್ಥವನ್ನು ಬರೆಯಲು ತಿಳಿಸುವರು ಹಿರೇಮಣಿ ಈ ಕಾರ್ಯವನ್ನು ನಿರ್ವಹಿಸುವರು.<br>(ಹೊಸ ಪದಗಳ ಮಿಂಚುಪಟ್ಟಿ ಬಳಸಿ) |
| | 40 ನಿ | | | | ಹಿರೇಮಣಿ | ಈಗಾಗಲೇ ಪರಿಚಯಿಸಿರುವಂತಹ "ಉಪಾಯ ಬಲ್ಲವನಿಗೆ ಅಪಾಯವಿಲ್ಲ" ಪಾಠಭಾಗವನ್ನು ಹಿರೇಮಣಿಯು ಪ್ರತಿಯೊಬ್ಬ ಮಗುವಿನಿಂದಲೂ ವಾಚನ ಮಾಡಿಸುವರು ನಂತರ ಬರೆಯಿಸುವರು.<br>ಇಲ್ಲಿ ಬರುವ ಹೊಸ ಪದಗಳ ಪಟ್ಟಿ ಮಾಡುವರು.<br>ಉದಾ : ತೀರ = ದಂಡೆ<br>ಮಿರಿ ಮಿರಿ ಮಿಂಚು = ಹೊಳೆ, ಪ್ರಕಾಶಿಸು.<br>ಹೊಸ ಪದಗಳ ಮಿಂಚುಪಟ್ಟಿ ಪ್ರದರ್ಶಿಸುವರು. | **ಜೀವನ ವಿಜ್ಞಾನ / ಲಲಿತಕಲೆ**<br>**ಆರೋಗ್ಯಕರ ಅಭ್ಯಾಸಗಳು** | ಸಮತೋಲನ ಆಹಾರದ ಬಗ್ಗೆ ಅರಿಯುವುದು | * ಆಹಾರ ಸಾಮಗ್ರಿಗಳ ಚಿತ್ರಪಟ | ಶಿಕ್ಷಕರು | ಮಕ್ಕಳಿಗೆ ಉತ್ತಮ ಆಹಾರ ಸೇವನೆ ಮತ್ತು ಅಭ್ಯಾಸಗಳ ಬಗ್ಗೆ ತಿಳಿಸುವರು.<br>* ನಮ್ಮ ಆಹಾರ ಎಲ್ಲಾ ಪೋಷಕಾಂಶಗಳನ್ನು ಹೊಂದಿರಬೇಕು. ದೇಹದ ಸಮರ್ಪಕ ಬೆಳವಣಿಗೆಗೆ ಮತ್ತು ಸದೃಢ ದೇಹಕ್ಕೆ ಅವಶ್ಯಕ.<br>* ಸಮತೋಲನ ಆಹಾರ ಸೇವಿಸದಿದ್ದರೆ ಅಥವ ಅಗತ್ಯಕ್ಕಿಂತ ಹೆಚ್ಚಿನ ಪ್ರಮಾಣದ ಆಹಾರ ಸೇವಿಸಿದರೆ ದೇಹಕ್ಕೆ ಅನಾರೋಗ್ಯ ಎಂದು ತಿಳಿಸುವರು. |

| ಅವಧಿ | ಸಮಯ ನಿಮಿಷ | ಮೂರನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಘಟಕದ ಹೆಸರು | ಸಾಮರ್ಥ್ಯಗಳು | ಬಳಸಬೇಕಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಘಟಕದ ಹೆಸರು | ಸಾಮರ್ಥ್ಯಗಳು | ಬಳಸಬೇಕಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 2ನೇ ಅವಧಿ | 10 ನಿ | ಪರಿಸರ ಅಧ್ಯಯನ<br>ಜೀವಿಗಳು ಮತ್ತು ನಿರ್ಜೀವಿಗಳು (ಮುಂದುವರೆಯುವುದು) | * ಸುತ್ತಲೂ ಇರುವ ವಸ್ತುಗಳನ್ನು ಗಮನಿಸುವರು<br>* ಸಜೀವ ಮತ್ತು ನಿರ್ಜೀವ ವಸ್ತುಗಳ ವಿಂಗಡಣೆಯನ್ನು ಕಲಿಯುವರು. | * ಮಕ್ಕಳು ಸಂಗ್ರಹಿಸಿದ ವಸ್ತುಗಳು. | ಶಿಕ್ಷಕರು | * ಜೀವಿಗಳ ಮುಖ್ಯ ಲಕ್ಷಣಗಳನ್ನು ಪಟ್ಟಿ ಮಾಡುವರು.<br>* ಸಜೀವ ಮತ್ತು ನಿರ್ಜೀವ ವಸ್ತುಗಳನ್ನು ಹೆಸರಿಸುವರು.<br>* ಮಕ್ಕಳು ಸಂಗ್ರಹಿಸಿದ ವಸ್ತುಗಳ ಗುಣಗಳ ಆಧಾರದ ಮೇಲೆ ವರ್ಗೀಕರಿಸುವರು. | ಗಣಿತ<br>ಸಂಖ್ಯೆಗಳು | 5, 6, ಮತ್ತು 7 ಅಂಕಿಗಳನ್ನೊಳಗೊಂಡ ಸಂಖ್ಯೆಗಳ ಸ್ಥಾನಬೆಲೆ | ಅಭ್ಯಾಸದಲ್ಲಿರುವ ಲೆಕ್ಕಗಳು ಸ್ಥಾನಬೆಲೆಯಿರುವ ಚೀಟಿ ಮತ್ತು ಕವಡೆಗಳು | ಹಿರೇಮಣಿ | <br><br>ಈ ರೀತಿ ಬರೆದ ಬೋರ್ಡ್‌ನ್ನು ಮತ್ತು ಕವಡೆಗಳನ್ನು ಹಿರೇಮಣಿಗೆ ನೀಡಿ ಒಬ್ಬೊಬ್ಬ ವಿದ್ಯಾರ್ಥಿಯ ಕೈಗೆ ಕವಡೆಗಳನ್ನು ನೀಡಿ ಬೋರ್ಡಿನ ಮೇಲೆ ಬೀಳುವಂತೆ ಹಾಕಲು ತಿಳಿಸುವರು. ಯಾವ ಯಾವ ಸ್ಥಾನದ ಮೇಲೆ ಎಷ್ಟೆಷ್ಟು ಕವಡೆಗಳು ಬಿದ್ದಿರುತ್ತವೋ. ಅದರ ಆಧಾರದ ಮೇಲೆ ಸಂಖ್ಯೆ ಬರೆಯಲು ತಿಳಿಸುವರು. ಈ ಚಟುವಟಿಕೆಯನ್ನು ಎಲ್ಲಾ ಮಕ್ಕಳಿಗೂ ಪುನರಾವರ್ತಿಸಲು ತಿಳಿಸುವರು. |
| | 30 ನಿ | | | | ಹಿರೇಮಣಿ | ಶಿಕ್ಷಕರ ಮಾರ್ಗದರ್ಶನದಂತೆ \ ಮಕ್ಕಳು ಚಟುವಟಿಕೆಯಲ್ಲಿ ಪಾಲ್ಗೊಳ್ಳುವರು. ಹಿರೇಮಣಿ ಇತರ ಮಕ್ಕಳಿಗೆ ಸಹಕಾರ ನೀಡುವರು. | | | ಮಿಂಚು ಪಟ್ಟಿಗಳು, ಚಾರ್ಟ್‌ಗಳು | ಶಿಕ್ಷಕರು | **ದೊಡ್ಡ ಸಂಖ್ಯೆಗಳನ್ನು ಓದುವ ಕ್ರಮ :**<br>ಪಠ್ಯಪುಸ್ತಕದಲ್ಲಿರುವ ಚಟುವಟಿಕೆ : 1, ಚಟುವಟಿಕೆ : 2 ಮತ್ತು ಚ : 3ರ ಸಹಾಯದಿಂದ ಸಂಖ್ಯೆಗಳನ್ನು ಓದುವ, ಸಂಖ್ಯೆಗಳನ್ನು ಅಕ್ಷರದಲ್ಲಿ ಬರೆಯುವ ಮತ್ತು ಸಂಖ್ಯೆಗಳನ್ನು ವಿಸ್ತರಿಸುವ ಕ್ರಮವನ್ನು ತಿಳಿಸುವರು.<br>**ಸಂಖ್ಯೆಯನ್ನು ವಿಸ್ತರಿಸುವ ಕ್ರಮ :**<br>ಸೂಚನೆ : ಪಠ್ಯ ಪುಸ್ತಕದ ಪುಟಸಂಖ್ಯೆ 6 ರಲ್ಲಿ ಚಟುವಟಿಕೆ 3ನ್ನು ಮಾಡಿಸುವರು. |
| | 40 ನಿ | | | | ಶಿಕ್ಷಕರು | * ವಿದ್ಯಾರ್ಥಿಗಳು ಮಾಡಿದ ಚಟುವಟಿಕೆಗಳನ್ನು ಪರಿಶೀಲಿಸುವರು.<br>* ಕೆಳಕಂಡ ವಸ್ತುಗಳನ್ನು ಸಜೀವ ಮತ್ತು ನಿರ್ಜೀವ ವಸ್ತುಗಳಾಗಿ ವಿಂಗಡಿಸಿ ಮಕ್ಕಳೊಂದಿಗೆ ಚರ್ಚಿಸುವರು. ಮೇಜು, ಕುರ್ಚಿ, ಹಸು, ಮನೆ, ಕೋಳಿ, ಮೀನು, ಆಲದಮರ, ಕಲ್ಲು, ಪುಸ್ತಕ ಇತ್ಯಾದಿ. | ಯೋಜನೆ | ಭಾಷಾ ವಿಷಯಕ್ಕೆ ಸಂಬಂಧಿಸಿದ ಯೋಜನೆ | * ಕವಿಗಳ ಭಾವಚಿತ್ರಗಳು | ಹಿರೇಮಣಿ | ಕನ್ನಡ ಭಾಷೆಯಲ್ಲಿ ಜ್ಞಾನಪೀಠ ಪ್ರಶಸ್ತಿ ಪಡೆದ ಕವಿಗಳ ಭಾವಚಿತ್ರ ಸಂಗ್ರಹಿಸುವರು.<br>ಸೂಚನೆ : ಮಕ್ಕಳನ್ನು ಅವಶ್ಯಕತೆಗೆ ತಕ್ಕಂತೆ ಗುಂಪುಗಳನ್ನು ಮಾಡಿ ಪ್ರತಿ ಗುಂಪಿಗೂ ಚಟುವಟಿಕೆ ಕೊಡುವರು. |

| ಅವಧಿ | ಸಮಯ ಹಂಚಿಕೆ | ಮೂರನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 3ನೇ ಅವಧಿ | 40 ನಿ | ಸಾ. ಉ. ಉ. ಕಾ | * ಮಣ್ಣನ್ನು ನೀರಿನೊಂದಿಗೆ ಕಲಸಿ ಹದಗೊಳಿಸಿ ಆಟಿಕೆಗಳನ್ನು ತಯಾರಿಸುವ ಕೌಶಲ ಬೆಳೆಸುವುದು | ಮಣ್ಣು ನೀರು ಕಡ್ಡಿ ಮಾದರಿಗಳು | ಶಿಕ್ಷಕರು | ಶಿಕ್ಷಕರು ನೀಡುವ ಸೂಚನೆ ಅನ್ವಯ ಮಣ್ಣನ್ನು ಸೋಸಿ, ಕಲ್ಲು, ಕಸ, ಕಡ್ಡಿಗಳನ್ನು ಹೊರತೆಗೆದು ಮಣ್ಣನ್ನು ಹದವಾಗಿ ಕಲಸುವರು.<br><br>ತಂಡಕ್ಕೊಬ್ಬ ನಾಯಕರನ್ನಾಗಿ ಮಾಡಿ ಹದಗೊಳಿಸಿದ ಮಣ್ಣಿನ ಮುದ್ದೆಯನ್ನು ವಿತರಿಸಿ ಮಡಿಕೆ, ಕುಡಿಕೆ, ಒಲೆ ಇತ್ಯಾದಿ ಮಾದರಿಗಳನ್ನು ಮಾಡಲು ತಿಳಿಸುವರು.<br><br>ಶಿಕ್ಷಕರು ಮಾಡಿದ ಮಾದರಿಗಳನ್ನು ವೀಕ್ಷಿಸುತ್ತಾ ಮಕ್ಕಳು ಮಾದರಿಗಳನ್ನು ಮಾಡುವರು. | 4ನೇ ತರಗತಿಯೊಂದಿಗೆ 5ನೇ ತರಗತಿ ಸೇರಿರುತ್ತದೆ. | | | | |
| | 40 ನಿ | | | | | ಕೇಳಿ-ಕಲಿ ಬಾನುಲಿ ಕಾರ್ಯಕ್ರಮವನ್ನು ಕೇಳುವರು | | | | | |

ದಿನ - 5



| | | ಮೂರನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯ ಉದ್ದೇಶ | ಬಳಸಬೇಕಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯ ಉದ್ದೇಶ | ಬಳಸಬೇಕಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 4ನೇ ಅವಧಿ | 40 ನಿ | ಸಾ.ಉ.ಉ.ಕಾ ಮಣ್ಣಿನ ಮಡಿಕೆ ಕುಡಿಕೆ ತಯಾರಿ (ಮುಂದುವರಿದುದು) | ಮಣ್ಣಿಂದ ವಿವಿಧ ವಸ್ತುಗಳನ್ನು ತಯಾರಿಸುವ ಕೌಶಲ ಬೆಳೆಸುವುದು. | ಮಣ್ಣು, ಕಡ್ಡಿಗಳು, ನೀರು, ಕಲ್ಲು, ಚರಕ...... ಇತ್ಯಾದಿ | ಶಿಕ್ಷಕರು | ಶಿಕ್ಷಕರು ತಯಾರಿಸಿ ಪ್ರದರ್ಶಿಸಿದ ಮಾದರಿಗಳಂತೆ, ವಿದ್ಯಾರ್ಥಿಗಳು ಅನುಸರಿಸಿ ಮಣ್ಣಿನ ಆಟಿಕೆಗಳನ್ನು ತಯಾರಿಸುವರು. | | | | | 5ನೇ ತರಗತಿಯು 4ನೇ ತರಗತಿಯೊಂದಿಗೆ ಹೊಂದಾಣಿಕೆಯಾಗಿರುತ್ತದೆ |
| | 40 ನಿ | ಮೌಲ್ಯಶಿಕ್ಷಣ ನೀತಿಕಥೆ (ಎರಡು ಗಿಳಿಗಳು) | 2) ಒಳ್ಳೆಯ ಮಾತುಗಳನ್ನಾಡುವ ಕೌಶಲ ಬೆಳೆಸುವುದು.<br>3) ಗುರು-ಹಿರಿಯರನ್ನು ಗೌರವಿಸುವ ಗುಣ ಬೆಳೆಸುವುದು. | ಎರಡು ಗಿಳಿಗಳ ಕಥೆಯ ಚಾರ್ಟ್ – ರಾಜನ ವಿಶ್ರಾಂತಿ ಪಡೆಯುವ, ಮುನಿಯೊಬ್ಬರ ಆಶ್ರಮದ ಚಿತ್ರವಿರುವ ಚಾರ್ಟ್. | ಶಿಕ್ಷಕರು | ಶಿಕ್ಷಕರು ಸ್ವರಭಾರದ ಏರಿಳಿತದೊಂದಿಗೆ ಭಾವನೆಗಳನ್ನು ಅಭಿವ್ಯಕ್ತಪಡಿಸುತ್ತ ಕಥೆಯನ್ನು ಮಕ್ಕಳಿಗೆ ಅರ್ಥವಾಗುವಂತೆ ಸರಳ ವಾಕ್ಯಗಳನ್ನು ಬಳಸಿ ಹೇಳುವರು.<br>* ಒಂದೇ ತಾಯಿಯ ಮಡಿಲಿನ ಎರಡು ಗಿಳಿಗಳು.<br>* ಕಟುಕನ ಮನೆಯಲ್ಲಿ ಬೆಳೆದ ಗಿಳಿಯ ಮಾತು–ವರ್ತನೆ.<br>* ಆಶ್ರಮದಲ್ಲಿ ಮುನಿಯ ಬಳಿ ಬೆಳೆದ ಗಿಳಿಯ ಮಾತು–ವರ್ತನೆ.<br>* ರಾಜನ ಆಲೋಚನೆ.<br>* ಕಥೆಯನ್ನು ಆಲಿಸಿದ ನಂತರ ಮಕ್ಕಳು ಕಥೆಯನ್ನಾಧರಿಸಿ ಕೇಳುವ ಪ್ರಶ್ನೆಗಳಿಗೆ ಉತ್ತರಿಸುವರು. | | | | | |
| 1ನೇ ಅವಧಿ | ದಿನ - | 6 | | | | ------------ ಸಾಮೂಹಿಕ ಕವಾಯಿತು ------------ | | | | | |

| | | ಮೂರನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಘಟಕದ ಹೆಸರು | ಸಾಮರ್ಥ್ಯಗಳು | ಬೋಧನೋಪಕರಣ / ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಘಟಕದ ಹೆಸರು | ಸಾಮರ್ಥ್ಯಗಳು | ಬೋಧನೋಪಕರಣ / ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| **2ನೇ ಅವಧಿ** | 20 ನಿ | **ಕನ್ನಡ**<br>**ಉಪಾಯ ಬಲ್ಲವನಿಗೆ – ಅಪಾಯವಿಲ್ಲ.** | * ಸ್ವರ ಏರಿಳಿತದೊಂದಿಗೆ – ಅಭಿನಯದ ಮೂಲಕ ಸರಳ ಕಥೆಗಳನ್ನು ವಿವರಿಸುವರು. | ಮೊಸಳೆ ಮತ್ತು ಕೋತಿ ಚಿತ್ರಪಟ<br>ಹೊಸ ಪದಗಳ ಮಿಂಚುಪಟ್ಟಿ | ಶಿಕ್ಷಕರು | **ಉಪಾಯ ಬಲ್ಲವನಿಗೆ ಅಪಾಯವಿಲ್ಲ**<br>(ಹಿಂದಿನ ಪಾಠದ ಕುರಿತು ಪ್ರಶ್ನೋತ್ತರ ಚರ್ಚೆ ಮಾಡುವರು) "ಹಣ್ಣೆಂದರೆ ಅವಳಿಗೆ ಪಂಚಪ್ರಾಣ ..........<br>.................................................................<br>.................................................................<br>.................................. ಬರುವೆಯಾ? ಎಂದು ಕೇಳಿತು.<br>* ಶಿಕ್ಷಕರು ಮಾದರಿ ವಾಚನ ಮಾಡುವರು.<br>* ಹೊಸಪದಗಳ ಅರ್ಥ ವಿವರಿಸುವರು.<br>ಸಂಕಟ = ಕಷ್ಟ<br>ಸಂಜೆ = ಹೊತ್ತು ಮುಳುಗು<br>ಪಂಚಪ್ರಾಣ = ಬಲುಇಷ್ಟ | **ಕನ್ನಡ**<br>**ಪಂಜೆಮಂಗೇಶರಾಯರು** | * ಸಂವಾದ ಚರ್ಚೆ ಹಾಗೂ ನಾಟಕಗಳನ್ನು ಆಲಿಸುವುದರ ಜೊತೆಗೆ ಅರ್ಥಮಾಡಿಕೊಳ್ಳುವರು.<br>* ಕೈಬರಹ, ಸ್ವಚ್ಛತೆ ಮತ್ತು ಮುಕ್ತ ಸಾಹಿತ್ಯವನ್ನು ನಿರರ್ಗಳವಾಗಿ ಓದುವರು.<br>* ಸರಳವಾಗಿ ಸ್ಪಷ್ಟವಾಗಿ – ಸರಿಯಾದ ಕ್ರಮದಲ್ಲಿ ಬರೆಯುವರು. | | ಹಿರೇಮಣಿ | ಪದ್ಯವನ್ನು ಪ.ಪು.ವನ್ನು ನೋಡಿ ತಪ್ಪಿಲ್ಲದಂತೆ ಸುಂದರವಾಗಿ ಬರೆಯಲು ಶಿಕ್ಷಕರು ಸೂಚಿಸುವರು. ಹಿರೇಮಣಿಯ ನೇತೃತ್ವದಲ್ಲಿ ಮಕ್ಕಳು ತಮ್ಮ ನೋಟ್‌ಬುಕ್‌ನಲ್ಲಿ ಬರೆಯುವರು. |
| | 40 ನಿ | | | | ಹಿರೇಮಣಿ | ಹಿರೇಮಣಿಯು ಒಬ್ಬೊಬ್ಬರಂತೆ ಎಲ್ಲ ವಿದ್ಯಾರ್ಥಿಗಳಿಂದ ಪಾಠವನ್ನು ಓದಿಸುವರು.<br>ಹೊಸ ಪದಗಳ ಅರ್ಥವನ್ನು ಬರೆದುಕೊಳ್ಳುವರು. | | | * ಚಿತ್ರಪಟ<br>* ಪದ್ಯ ಬರಹದ ಚಾರ್ಟ್ | ಶಿಕ್ಷಕರು | "ಎಲ್ಲಿ ಭೂರಮೆ ದೇವ ಸನ್ನಿಧಿ ..............................................<br>.................................................................<br>.................................. ದೈವಭಕ್ತರು ಮತ್ತು ಸರಳ ಜೀವಿಗಳು".<br>ವರೆಗೆ ಶಿಕ್ಷಕರು ಮಾದರಿ ವಾಚನ ಮಾಡಿ ಹೊಸ ಪದಗಳ ಅರ್ಥ ತಿಳಿಸುವರು.<br>ಚಾರ್ಟ್‌ನಲ್ಲಿ ಬರೆದ ಮಂಗೇಶರಾಯರ ಕವನವನ್ನು ತಾಳ–ಲಯ–ರಾಗಬದ್ಧವಾಗಿ ಹಾಡಿಸುವರು. |
| | 20 ನಿ | | | | ಶಿಕ್ಷಕರು | (ಮುಂದುವರೆಯುವುದು)<br>ಮೇಲೆ ಹೇಳಿದ ಪ್ಯಾರಾದ ವಿವರವನ್ನು ಚಿತ್ರಪಟ ತೋರಿಸಿ ಸರಳ ಪ್ರಶ್ನೆಗಳನ್ನು ಕೇಳುತ್ತ ಪಾಠ ವಿವರಣೆ ಮಾಡುವರು.<br>ಹೊಸ ಪದಗಳ ಅರ್ಥ ಓದಿಸುವರು. | | | | ಹಿರೇಮಣಿ | "ಪಂಜೆ ಮಂಗೇಶರಾಯರು" – ಪಾಠ – 2ನ್ನು ವಿದ್ಯಾರ್ಥಿಗಳಿಂದ ವೈಯುಕ್ತಿಕವಾಗಿ ಓದಿಸುವರು. |

| ಅವಧಿ | ಸಮಯ ಹಂಚಿಕೆ | ಮೂರನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಐದನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 3ನೇ ಅವಧಿ | 40 ನಿ | ಸಾ.ಉ.ಉ.ಕಾ<br>ಮಣ್ಣಿನಲ್ಲಿ ಹಣ್ಣಿನ ಮಾದರಿಗಳ ತಯಾರಿಕೆ | * ವಿಧ ವಿಧ ಹಣ್ಣುಗಳ ಹೆಸರುಗಳನ್ನು ತಿಳಿಯುವರು.<br>* ಬಾಳೆ, ಸೇಬು, ದ್ರಾಕ್ಷಿ, ಸೀತಾಪಲ ಹಣ್ಣುಗಳ ಮಾದರಿಗಳನ್ನು ತಯಾರಿಸುವರು.<br>* ಮಣ್ಣಿನಿಂದ ಹಣ್ಣುಗಳ ಮಾದರಿಗಳನ್ನು ತಯಾರಿಸುವ ಕೌಶಲಗಳನ್ನು ಬೆಳೆಸುವುದು. | ಮರಳು, ಕಡ್ಡಿ, ಕಲ್ಲು, ಹರಳು, ನೀರು. | ಶಿಕ್ಷಕರು | * ಶಿಕ್ಷಕರು ಮಣ್ಣನ್ನು ಹದಗೊಳಿಸುವ ವಿಧಾನ ತಿಳಿಸುವರು.<br>* ವಿಧ ವಿಧ ಹಣ್ಣುಗಳ ಹೆಸರುಗಳನ್ನು ಬರೆಯುವರು.<br>* ಒಂದೊಂದೆ ಹಣ್ಣಿನ ಮಾದರಿಗಳನ್ನು ಶಿಕ್ಷಕರು ಮಾಡಿ ಪ್ರದರ್ಶಿಸುವರು.<br>* ವಿದ್ಯಾರ್ಥಿಗಳಿಗೆ ಮಣ್ಣಿನ ಮುದ್ದೆ ವಿತರಿಸಿ ಮಾದರಿಗಳನ್ನು ಮಾಡುವ ವಿಧಾನ ತಿಳಿಸುವರು. | | | | | 5ನೇ ತರಗತಿಯು 4ನೇ ತರಗತಿಯೊಂದಿಗೆ ಹೊಂದಾಣಿಕೆಯಾಗಿರುತ್ತದೆ |
| | 40 ನಿ | | | | ಶಿಕ್ಷಕರು | * ವಿದ್ಯಾರ್ಥಿಗಳು ತಂಡದೊಳಗೆ ವೈಯಕ್ತಿಕವಾಗಿ ಬಾಳೆ, ಸೇಬು, ದ್ರಾಕ್ಷಿ ಹಾಗೂ ಸೀತಾಫಲ ಹಣ್ಣಿನ ಮಾದರಿಗಳನ್ನು ತಯಾರಿಸಲು ತೊಡಗುವರು.<br>* ಹಣ್ಣುಗಳ ಸೇವನೆ ಮಾಡುವುದು ಏಕೆ? ಎಂಬುದರ ಕುರಿತು ಚರ್ಚಿಸುವರು. | | | | | |

| ಅವಧಿ | ಸಮಯ ಹಂಚಿಕೆ | ಮೂರನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಘಟಕದ ಹೆಸರು | ಕಲಿಕಾಂಶಗಳು | ಬಳಸುವ ಕಲಿಕೋಪಕರಣಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಘಟಕದ ಹೆಸರು | ಕಲಿಕಾಂಶಗಳು | ಬಳಸುವ ಕಲಿಕೋಪಕರಣಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1ನೇ ಅವಧಿ | 20 ನಿ | ಕನ್ನಡ<br>ಉಪಾಯವಿದ್ದವನಿಗೆ – ಅಪಾಯವಿಲ್ಲ (ಮುಂದುವರಿಕೆ) | * ಸ್ವರದ ಏರಿಳಿತದೊಂದಿಗೆ ಅಭಿನಯದ ಮೂಲಕ ಸರಳ ಕಥೆಗಳನ್ನು ಓದಿಸುವುದು. | | ಶಿಕ್ಷಕರು | **ಪೂ.ಸಿ.ಚ.**<br>ಹಿಂದಿನ ಅವಧಿಯ ಪಾಠದ ಬಗ್ಗೆ ಸರಳ ಪ್ರಶ್ನೆಗಳನ್ನು ಕೇಳುವರು. | ಕನ್ನಡ<br>ಪಂಜೆ ಮಂಗೇಶರಾಯರು (ಮುಂದುವರಿಕೆ) | * ಸಂವಾದ ಚರ್ಚೆ ಹಾಗೂ ನಾಟಕಗಳನ್ನು ಆಲಿಸುವುದರ ಜೊತೆಗೆ ಅರ್ಥಮಾಡಿಕೊಳ್ಳುವುದು.<br>* ಕ್ರಿಯಾತ್ಮಕ, ಸಜ್ಜಿಕೆ ಮತ್ತು ಮಕ್ಕಳ ಸಾಹಿತ್ಯವನ್ನು ನಿರರ್ಗಳವಾಗಿ ಓದುವುದು.<br>* ಸರಳವಾಗಿ, ಸ್ಪಷ್ಟವಾಗಿ – ಸರಿಯಾದ ಕ್ರಮದಲ್ಲಿ ಬರೆಯುವುದು. | ಪ್ರಶ್ನಾವಳಿ ಕಾರ್ಡುಗಳು | ಹಿರೇಮಣಿ | **ಪೂ.ಸಿ.ಚ.**<br>ಹಿಂದಿನ ದಿನದ ಪಾಠದ ಬಗ್ಗೆ ಹಿರೇಮಣಿ ಶಿಕ್ಷಕರು ತಯಾರಿಸಿ ಕೊಟ್ಟ ಪ್ರಶ್ನಾವಳಿಯನ್ನು ಬಳಸಿ ಪ್ರಶ್ನೆ ಕೇಳುವನು. |
| | 20 ನಿ | | | ಹೊಸ ಪದಗಳ ಮಿಂಚುಪಟ್ಟಿ | ಶಿಕ್ಷಕರು | **ಕಲಿಕಾ ಹಂತ**<br>ನಿನ್ನ ಹೆಂಡತಿ ಎಷ್ಟು ಒಳ್ಳೆಯವಳು? .............................. .............................................................. ............................................ ಮನೆ ಕಡೆ ಹೊರಟಿತು".<br>ಇಲ್ಲಿಯವರೆಗೆ ಮಾದರಿಯಾಗಿ ಓದುವರು.<br>**ಹೊಸ ಪದಗಳು**<br>ಲಗುಬಗೆ – ಅವಸರ, ತೀವ್ರ<br>ಹೆಬ್ಬಯಕೆ – ಬಹಳ ಆಸೆ, ಹಿರಿದಾದ ಆಸೆ<br>ದಿಗಿಲು – ಭಯ, ಹೆದರಿಕೆ. | | | | ಹಿರೇಮಣಿ | ಪೂ.ಸಿ.ಚ. ಯಲ್ಲಿ ಕೊಟ್ಟ ಪ್ರಶ್ನಾವಳಿಗೆ ಉತ್ತರವನ್ನು ಎಲ್ಲ ಮಕ್ಕಳಿಂದ ಬರೆಸುವನು. |
| | 20 ನಿ | | | | ಹಿರೇಮಣಿ | ಮಕ್ಕಳಿಂದ ಓದಿಸಿ ಮತ್ತು ಹೊಸ ಪದಗಳ ಅರ್ಥ ಬರೆದುಕೊಳ್ಳುವರು. | | | | ಶಿಕ್ಷಕರು | **ಕಲಿಕಾ ಹಂತ :**<br>ಶಿಕ್ಷಕರಿಂದ ಮಾದರಿ ವಾಚನ.<br>"ನೇತ್ರಾವತಿ ನದಿ .............................................................. .............................................................. ............................................ ಕವಿತೆ ಹೇಳಿ ನಕ್ಕು ನಲಿಸುತ್ತಿದ್ದರು.<br>**ಹೊಸ ಪದಗಳ ಅರ್ಥ**<br>* ಅಳವಡಿಸಿಕೊಳ್ಳುವುದು = ತನ್ನದನ್ನಾಗಿ ಮಾಡಿಕೊಳ್ಳುವುದು.<br>* ವ್ಯಾಸಂಗ = ಅಧ್ಯಯನ<br>* ಬೆರೆತು = ಕೂಡಿಕೊಂಡು |
| | 20 ನಿ | | | | ಶಿಕ್ಷಕರು | **ಅಭ್ಯಾಸ ಚಟುವಟಿಕೆ**<br>ವೈಯಕ್ತಿಕವಾಗಿ ಪಾಠವನ್ನು ಮಕ್ಕಳಿಂದ ಓದಿಸುವರು. ಅದನ್ನು ಬೇರೆ ಮಕ್ಕಳು ಅನುಕರಿಸಿ ಓದುವರು. ಶಿಕ್ಷಕರು ತಪ್ಪುಗಳನ್ನು ತಿದ್ದುವರು ಮತ್ತು ಪಾಠವನ್ನು ವಿವರಿಸುವರು. | | | | ಹಿರೇಮಣಿ | ವಿದ್ಯಾರ್ಥಿಗಳು ಪಾಠವನ್ನು ಮೌನವಾಗಿ ಓದುವರು. ಶಿಕ್ಷಕರು ಕ.ಹ. ಮೇಲೆ ಬರೆದ ಪ್ರಶ್ನೆಗಳಿಗೆ ಉತ್ತರವನ್ನು ಬರೆಯುವರು.<br>**ಉದಾ :**<br>* ತಂದೆಯವರು ಸಾಯುವ ಮುನ್ನ ಏನು ಹೇಳಿದರು?<br>* ಮಂಗೇಶರಾಯರು ಯಾವುದರ ಸಹಾಯದಿಂದ ಮಕ್ಕಳಿಗೆ ಕಲಿಸುವುದು ಉತ್ತಮ ಎಂದು ಭಾವಿಸಿದ್ದರು? |

| | | ಮೂರನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| **2ನೇ ಅವಧಿ** | 20 ನಿ | | | * ಖಾಲಿ ಬಾಟಲಿ, * ದಾರದ ತುಂಡುಗಳು * ಕಡ್ಡಿ | | **ಪೂ.ಸಿ.ಚ.** **ಸಹಕಾರದ ಆಟ ಆಡಿಸುವರು. ವಿವರಣೆ :** ಒಂದು ಕಡ್ಡಿಗೆ ಸಮಾನ ಉದ್ದವಿರುವ ಹತ್ತು ದಾರದ ತುಂಡುಗಳನ್ನು ಕಟ್ಟುವುದು. ತರಗತಿ ಕೋಣೆ ಮಧ್ಯದಲ್ಲಿ ಬಾಟಲಿಯನ್ನು ಇಡುವುದು. ಪ್ರತಿ ದಾರದ ಒಂದೊಂದು ತುದಿಗಳನ್ನು ಒಂದೊಂದು ಮಗುವಿನ ಕೈಗೆ ಕೊಡುವುದು. ಮಕ್ಕಳು ಸಹಕಾರದಿಂದ ಕಡ್ಡಿಯನ್ನು ಬಾಟಲಿಯಲ್ಲಿ ತೂರಿಸುವುದು.  | | | | | |
